
₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole Vol XXXIII - 8 August 2015

PAGES 16



ಭಾರತದ ಮಾಜಿ ರಾಷ್ಟ್ರಪತಿ
ಭಾರತ ರತ್ನ ಪ್ರಶಸ್ತಿ ವಿಜೇತ
ಡಾ. ಎ. ಪಿ. ಜೆ. ಅಬ್ದುಲ್ ಕಲಾಂ




ಗಡಿನಾಡ ಗಾಂಧಿ, ನಾಡೋಜ
ಡಾ. ಕಯ್ಯಾರ ಕಿಞ್ಞಣ್ಣ ರೈ

ನಮ್ಮನ್ನಗಲಿದ ಈ ಇಬ್ಬರಿಗೂ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

## ಶ್ರೀ ಸ್ವರ್ಣ ಗೌರಿ ಹಾಗೂ ಶ್ರೀ ಮಹಾಗಣಪತಿ ಮಹೋತ್ಸವ



ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ 1937 ರ ಶ್ರೀ ಮನ್ಮಥ ನಾಮ ಸಂವತ್ಸರದ ಭಾದ್ರಪದ ಶುದ್ಧ ತೃತೀಯ ಬುಧವಾರ 16.09.2015 ರಂದು ಶ್ರೀ ಸ್ವರ್ಣ ಗೌರಿಯನ್ನು ಮತ್ತು ಚತುರ್ಥಿ ಗುರುವಾರ 17.09.2015ರಂದು ಶ್ರೀ ಮಹಾಗಣಪತಿಯನ್ನೂ ಆವಾಹಿಸಿ, ಸಪ್ತಮಿ ಭಾನುವಾರ ದಿನಾಂಕ 20.09.2015 ರವರೆಗೆ ಉತ್ಸವವನ್ನು ಅಸೋಸಿಯೇಶನ್ನಿನ ಆಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ. ದಿನಾಂಕ 20.09.2015 ನೇ ಭಾನುವಾರ ಬೆಳಗ್ಗೆ 9.00 ರಿಂದ ಸಕಲ ಪೂಜಾದಿ ಸೇವೆಗಳನ್ನು ಸಲ್ಲಿಸಿ, ಮಹಾ ಮಂಗಳಾರತಿ ಮಾಡಿ ಮೆರವಣಿಗೆಯ ನಂತರ ಗೌರಿ ಗಣಪತಿಯನ್ನು ದಾದರ್ ಸಮುದ್ರ ತೀರದಲ್ಲಿ ವಿಸರ್ಜಿಸಲಾಗುವುದು. ತಾವುಗಳೆಲ್ಲರೂ ಈ ಮಹೋತ್ಸವದಲ್ಲಿ ಭಾಗವಹಿಸಿ, ಉದಾರ ಸಹಾಯ ಮಾಡಿ ಭಗವತ್ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಸೇವಾರ್ಥ ಕೊಡಲಿಚ್ಚಿಸುವವರು ತಮ್ಮ ಹೆಸರು, ಜನ್ಮ ನಕ್ಷತ್ರ, ಗೋತ್ರ, ಪೂಜೆ ನೆರವೇರಿಸಬೇಕಾದ ದಿನಾಂಕ ಬರೆದು ನಮ್ಮ ವಿಳಾಸಕ್ಕೆ ದಿನಾಂಕ 14.09.2015 ರೊಳಗೆ ತಲುಪಿಸಿರಿ ಅಥವಾ email ಮಾಡಿ.

**ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು**

**ವಿ.ಸೂ.:**

1. ಸೇವಾರ್ಥ ನಡೆಸಲಿಚ್ಛಿಸುವವರು 251/- ರೂ. ಗಳ ಅಥವಾ ಹೆಚ್ಚಿನ ಕಾಣಿಕೆಯನ್ನು (ನಗದು /ಚೆಕ್) ಅಂಚೆ ಮೂಲಕ ಕಳುಹಿಸಬಹುದು ಅಥವಾ ಸ್ವತಃ ಅಸೋಸಿಯೇಶನ್ನಿನ ಕಛೇರಿಗೆ ಬಂದು ನೀಡಬಹುದು.
2. ಗೌರಿ ಪೂಜೆಯಲ್ಲಿ ಭಾಗವಹಿಸಲು ಬಯಸುವ ಮಹಿಳೆಯರು ತಮ್ಮ ಹೆಸರನ್ನು ದಿನಾಂಕ 26.08.2014 ರೊಳಗೆ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಕೋರಿಕೆ.
3. ಪೂಜೆ ಕಾರ್ಯಕ್ರಮದ ಅಂಗವಾಗಿ ನಡೆಸುವ ಪ್ರತಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಿಚ್ಛಿಸುವ ಸದಸ್ಯರು ರೂ. 3000/- ವನ್ನು ದೇಣಿಗೆಯಾಗಿ ಕೊಡಬೇಕೆಂದು ವಿನಂತಿ.

### 63rd Year of Shri Swarna Gauri and Shree Mahaganapathi Pooja

In keeping with its glorious tradition, your Association is conducting Shri Swarna Gauri and Shri Mahaganapathi Pooja this year also, with all pomp and gaiety from 16th September 2015 to 20th September 2015. This event will be marked by the traditional pooja every morning and cultural programmes followed by traditional pooja in the evenings. The Visarjana will be on 20th September 2015. A detailed programme will be mailed to you in due course. Those desirous of giving "Sevartha" Rs. 251/- or more may please send their cheque to the Mysore Association office, stating the preferred date for pooja along with your name, gotra and nakshatra.

*ಸಮಸ್ತ ಬಾಂಧವರಿಗೆ ಸ್ವಾತಂತ್ರ್ಯೋತ್ಸವದ ಶುಭಾಶಯಗಳು*

**ತಾ. 15-8-2015 ಶನಿವಾರ**

**ಅಸೋಸಿಯೇಷನ್‌ನಲ್ಲಿ ಬೆಳಿಗ್ಗೆ 10.00ಕ್ಕೆ ಸರಿಯಾಗಿ ಧ್ವಜಾರೋಹಣ ಸಮಾರಂಭ ಜರಗಲಿದೆ.**

**'ಭಾವ - ಗಾನ - ಯೋಗ'**

**ಭೈರವಿ ಆರ್ಟ್ಸ್ ಎಂಡ್ ಡಾನ್ಸ್ ಅಕಾಡೆಮಿ, ಉಡುಪಿ ಇವರಿಂದ ಮಕ್ಕಳ ನೃತ್ಯ ಕಾರ್ಯಕ್ರಮ**

*ಎಲ್ಲರಿಗೂ ಹಾರ್ದಿಕ ಸ್ವಾಗತ*

# A picnic to scenic paradise called Lohagad



The Mysore Association arranged a one-day trekking to Lohagad near Lonavala on 9th August 2015. A group of 30 people took the bus to Malavali, a nearby village at the foot of the Western Ghats from where they started trekking up. A brief history and other details of the spot along with some exciting photos of the exercise by the group is given here.

Lohagad is one of the many hill forts of Maharashtra state in India. Situated close to the hill station Lonavala and 52 km (32 mi) northwest of Pune, Lohagad rises to an elevation of 1,033 m (3,389 ft) above sea level. The fort is connected to the neighboring Visapur fort by a small range. The fort was under the Maratha empire for the majority of time, with a short period of 5 years under the Mughal empire.



**History**

Lohagad has a long history with several dynasties occupying it at different periods of time: Satavahanas, Chalukyas, Rashtrakutas, Yadavas, Bahamani Nizams, Mughals and Marathas. As you can see here, the Fort was built by the Kannada dynasties Shatavahanas and the Rashtrakutas. Even Chalukyas, and Yadavas and Bahanami Nizams ruled over this Fort before it was captured by the Maratha King Shivaji.

Shivaji captured the Fort in 1648 CE, but he was forced to surrender it to the Mughals in 1665 CE by the Treaty of Purandar. Shivaji Maharaj recaptured the fort in 1670 CE and used it for keeping his treasury. This fort was used to keep the loot from Surat. Later in Peshwa time Nana Phadnavis used this fort for living for some time and built several structures in the fort such as a big tank and a step-well.

*(contd. to pg. 16)*

ಸಂಪಾದಕೀಯ

# ನೇಸರು

ತಿಂಗಳೋಲೆ

ಸಂಪುಟ 33 ಅಗೋಸ್ತು 2015 ಸಂಚಿಕೆ 8

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್

393, ಭಾವು ದಾಜಿ ರಸ್ತೆ,

ಮಾಟುಂಗ,

ಮುಂಬಯಿ-400 019.

✆ 24024647 / 2403 7065

Fax : 2401 0574

Email :

mysoreassociation.mumbai@gmail.com

Website :

www.mysoreassociation.in

## ಡಾ. ಅಬ್ದುಲ್ ಕಲಾಂಗೆ ನಮ್ಮ ಸಲಾಂ

ನಜವಾದ ಜನನಾಯಕ ಹೇಗಿರಬೇಕು ಮತ್ತು ಯಾರನ್ನು ನಜವಾದ ಜನನಾಯಕ ಎಂದು ಕರೆಯಬಹುದು ಎನ್ನುವುದಕ್ಕೆ ಒಂದು ಸೀಮಾರೇಖೆಯನ್ನು ಹಾಕಿಕೊಟ್ಟವರು ಬಹುಶಃ ಕಲಾಂ ಒಬ್ಬರೇ ಅನಸುತ್ತದೆ. ದೇಶದ ಬಹುಮುಖ್ಯ ಅಂಗವಾದ ರಾಜಕೀಯ ಕ್ಷೇತ್ರದಲ್ಲಿ ಕಂಡುಬರುತ್ತಿರುವ ಭ್ರಷ್ಟಾಚಾರ, ಹಗರಣಗಳ ಮೇಲೇ ಹಗರಣಗಳು ಇವೆಲ್ಲವುಗಳಿಂದ ಕಲುಷಿತಗೊಂಡಿರುವ ರಾಜಕೀಯ ಕ್ಷೇತ್ರವೆಂದರೆ ಮಾರು ದೂರ ಓಡುವ ಯುವಜನಾಂಗವನ್ನು ಒಂದೆಡೆ ಕಲೆಹಾಕಿದ್ದು ಅಬ್ದುಲ್ ಕಲಾಂ ಅವರು. ಅವುಲ್ ಪಕೀರ್ ಜೈನುಲಬ್ದೀನ್ ಅಬ್ದುಲ್ ಕಲಾಂ 11ನೇ ರಾಷ್ಟ್ರಪತಿಯಾಗಿ ಆಯ್ಕೆಗೊಂಡಾಗ ಅನೇಕರ ಮನದಲ್ಲಿ ಸಾಧನೆಯ ಛಲವನ್ನು ಉಕ್ಕಿಸಿದ್ದಂತೂ ನಜ. ಕಲಾಂ ಅವರು ಖ್ಯಾತ ವಿಜ್ಞಾನಿ, ತಂತ್ರಜ್ಞಾನಿ, ಶಿಕ್ಷಕರಾಗುವುದರೊಂದಿಗೆ ಅವರೊಬ್ಬ ಶ್ರೇಷ್ಠ ಮನಾವತಾವಾದಿ ಎನ್ನುವುದನ್ನು ಮರೆಯುವಂತಿಲ್ಲ. ಒಂದೆಡೆ ಜಾನ್ ಕ್ವಿನ್ಸ ಆಡಮ್ಸ್ ಹೇಳುತ್ತಾನೆ "If your actions inspire others to dream more, learn more, do more and become more, you are a leader" ಕಲಾಂ ಅವರ ಕಾರ್ಯ ವೈಖರಿ ಈ ಮಾದರಿಯದ್ದು. ಕಲಾಂ ಅವರ ಬದುಕೇ ನಮಗೆಲ್ಲ ಸಂದೇಶವಾದ ಹಾಗೆ, ಕಲಾಂ ಅವರೂ ಕೂಡ 'ಅವರ ಬದುಕೇ ಅವರ ಸಂದೇಶ' ಎಂಬುದನ್ನು ಅಪೂರ್ವ ರೀತಿಯಲ್ಲಿ ಸಾಧಿಸಿ ತೋರಿಸಿಕೊಟ್ಟಿದ್ದಾರೆ.

ಅಬ್ದುಲ್ ಕಲಾಂ ಅವರಂತೆ ಬದುಕುವುದು, ಬಾಳ್ವೆ ನಡೆಸುವುದು ಯಾರಿಗಾದರೂ ಬಹುಕಷ್ಟದ್ದೇ. ತಮ್ಮ 83 ವರ್ಷಗಳ ಅರ್ಥಪೂರ್ಣ ಬದುಕನ್ನು ಪೂರೈಸಿ, ತಮ್ಮ ಹಿಂದೆ ಅಳಿಸಲಾಗದ ಹೆಜ್ಜೆಗಳನ್ನು ಮೂಡಿಸಿ ಇಹಲೋಕದ ಯಾತ್ರೆ ಗೈದ ಕಲಾಂ ಇಂದಿಗೂ ಎಂದೆಂದಿಗೂ ನಮಗೆ ಅಚ್ಚಳಿಯದ ಆದರ್ಶದ ಪ್ರತಿರೂಪ. ಸ್ವಾತಂತ್ರ್ಯ ಹೋರಾಟಗಾರರನ್ನು ಬಿಟ್ಟರೆ ಬಹುಶಃ "ನಮ್ಮ ಮೆಚ್ಚಿನ ಜನನಾಯಕ" ಯಾರು ಎಂದು ಕೇಳಿದರೆ ಅಬ್ದುಲ್ ಕಲಾಂರತ್ತ ಹೆಮ್ಮೆಯಿಂದ ಬೊಟ್ಟು ಮಾಡಿತೋರಿಸುತ್ತೇವೆ. ಮಹಾಭಾರತದ ಭೀಷ್ಮರಂತಿದ್ದ ಕಲಾಂ ಅವರು ಜನಸಾಮಾನ್ಯರ ರಾಷ್ಟ್ರಪತಿಯಾಗಿದ್ದರು. "ಜೀವನದ ಕೊನೆಯ ಕ್ಷಣದವರೆಗೂ ಲವಲವಿಕೆಯಿಂದ ಇದ್ದು, ಜನತೆ ತನಗೆ ವಹಿಸಿದ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡುತ್ತಲೇ ಬಂದಿದ್ದರು. ಇದು ಅವರ ಕೊನೆಯ ಸಂದೇಶವಾಗಿರಬಹುದು. ತಮ್ಮ ಜೀವನದ ಒಂದೊಂದು ಕ್ಷಣವನ್ನು ಅತ್ಯಮೂಲ್ಯವೆಂದು ಭಾವಿಸಿ, ಅದರ ಸದುಪಯೋಗಕ್ಕಾಗಿ ಜನತೆಯ ಸೇವೆಗಾಗಿ ಮುಡಿಪಾಗಿಟ್ಟರು. ಈ ಇಳಿ ವಯಸ್ಸಿನಲ್ಲೂ ಭಾರತವಲ್ಲದೆ, ಜಗತ್ತಿನ ಅನೇಕ ರಾಷ್ಟ್ರಗಳನ್ನು ಸುತ್ತಿ ಬಂದು ಅಲ್ಲಿ ತಾನು ಪಡೆದ ಅನುಭವವನ್ನು ಭಾರತೀಯರ ಏಳಿಗೆಗಾಗಿ ಮೀಸಲಾಗಿಟ್ಟರು.

ಕಲಾಂ ಅವರು ಭಾರತಕ್ಕೆ ಕೊಟ್ಟ ಸೇವೆ ಅವರನ್ನು ಜಾತಿ, ಮತ, ಪಂಥಗಳಿಂದ ಮೇಲೇಕ್ಕೇರಿಸಿತು. ಎಲ್ಲ ಜನಾಂಗದವರಿಗೆ ಪ್ರಿಯರಾದವರು, ಎಲ್ಲರೂ ಸರ್ವಾನುಮತದಿಂದ ಪೂಜಿಸಿ ಆದರಿಸುತ್ತಾರೆ. ಒಬ್ಬ ನಾಯಕನಾದವನಗೆ ಇನ್ನೇನು ಬೇಕು. ಸರ್ವಜನ ಪ್ರಿಯನಾಗಿ, ಎಲ್ಲರ ಮನಸ್ಸಿನಲ್ಲಿ ವಿರಾಜಮಾನನಾಗುವುದೇ ಅವನಗೆ ದಕ್ಕುವ ಬಹುದೊಡ್ಡ ಬಹುಮಾನ. ಹೀಗಾಗಿ ಕಲಾಂ ಅವರ ವ್ಯಕ್ತಿತ್ವ ವಿನೂತನವಾದುದು. ದೇಶದ ಪ್ರಥಮ ಪ್ರಜೆ 'ರಾಷ್ಟ್ರಪತಿ' ಪದವಿ ವಹಿಸಿಕೊಂಡಾಗಲೂ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದೆ, ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಂಡರು. ರಾಷ್ಟ್ರಪತಿ ಭವನವನ್ನು ಮೊದಲ ಬಾರಿಗೆ ಜನಸಾಮಾನ್ಯರಿಗೋಸ್ಕರ ತೆರೆಯುವ ಪ್ರಯತ್ನ ಮಾಡಿದರು.

ನಾವು ಜೀವನದಲ್ಲಿ ಏನೇನೋ ಕನಸುಗಳನ್ನು ಕಟ್ಟಿಕೊಂಡಿರುತ್ತೇವೆ. ಆ ಕನಸುಗಳು ನನಸಾಗಲಿಲ್ಲವೆಂದು ಕೊರಗುತ್ತಾ ಇವತ್ತಿನ ದಿನವನ್ನು ವ್ಯರ್ಥವಾಗಿ ಹಾಳುಮಾಡಿ ಬಿಡುತ್ತೇವೆ. ಆದರೆ ನಮ್ಮೆಲ್ಲರಂತೆ ಕಲಾಂ ಅವರು ಕೂಡ ಭಾರತೀಯ ವಾಯುಸೇನೆಯ ಯುದ್ಧವಿಮಾನದ ಪೈಲೆಟ್ ಆಗಬೇಕೆಂಬ ಬಲವಾದ ಆಕಾಂಕ್ಷೆಯನ್ನು ಇಟ್ಟುಕೊಂಡಿದ್ದರು. ಆದರೆ ಅದು ಸ್ವಲ್ಪದರಲ್ಲೇ ತಪ್ಪಿ ಹೋದಾಗ ಅದಕ್ಕಾಗಿ ಮರುಗದೆ, ಅದನ್ನೇ ಛಲವನ್ನಾಗಿ ಸ್ವೀಕರಿಸಿ, ಅವರ ಈ ಛಲ, ದೇಶದ ರಕ್ಷಣಾ ಪಡೆಗಳಾದ, ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆಗಳ ಮಹಾ ಮುಖ್ಯಸ್ಥರಾಗಿರುವ ರಾಷ್ಟ್ರಪತಿಯ ಪಟ್ಟಕೇರುವಂತೆ ಮಾಡಿತು.

ಬ್ರಹ್ಮಚಾರಿಯಾಗಿದ್ದ ಕಲಾಂ ಅವರು ಜೀವನದುದ್ದಕ್ಕೂ ಶುದ್ಧ ಶಾಕಾಹಾರಿಯಾಗಿದ್ದರು. ಕಟ್ಟಾ ಬ್ರಾಹ್ಮಣರಂತಿದ್ದ ಅವರ ಜೀವನಶೈಲಿಯನ್ನು ನೋಡಿ ಅವರ ಸ್ನೇಹಿತರು 'ಕಲಾಂ ಅಯ್ಯರ್' ಎಂದೇ ಕರೆಯುತ್ತಿದ್ದರಂತೆ. ದೇಶದ ರಾಷ್ಟ್ರಪತಿಯಾಗಿದ್ದರೂ ಐಷಾರಾಮದ ಜೀವನದಿಂದ ಬಹುದೂರ ಉಳಿದದ್ದು, ಅವರ ಸರಳ ಹಾಗೂ ನೇರ ವ್ಯಕ್ತಿತ್ವದ ದರ್ಶನವಾಗುತ್ತದೆ. ಭಾರತದ ಭವಿಷ್ಯದ ಬಗ್ಗೆ ಹಗಲಿರುಳು ತಾವು ಚಿಂತಿಸುವುದರ ಜೊತೆಗೆ, ದೇಶದ ಜನತೆಯನ್ನು ಚಿಂತನೆಗೆ ಹಚ್ಚಿದವರು ಕಲಾಂ. ರಾಷ್ಟ್ರಪತಿಯಾಗುವ ಮೊದಲು ಮತ್ತು ಅನಂತರ ದೇಶದ ಮಕ್ಕಳಿಗೆ ಬಲಿಷ್ಟ ಭಾರತ ನರ್ಮಾಣ ಕಾರ್ಯದಲ್ಲಿ ಕೈಜೋಡಿಸುವಂತೆ ಪ್ರೇರೇಪಿಸಿದರು. ಮಹಾನ್ ರಾಷ್ಟ್ರದ ರಾಷ್ಟ್ರಪತಿಯಾಗಿ ಕಲಾಂ ಗೈದ ಸಾಧನೆ, ಯಶಸ್ಸು, ಸಂಪಾದಿಸಿದ ಕೀರ್ತಿ, ಪಡೆದ ಪ್ರಶಸ್ತಿ, ಪುರಸ್ಕಾರ, ಬಿರುದು ಇತ್ಯಾದಿಗಳು ಅನನ್ಯವಾದವು. ಭಾರತವಲ್ಲದೆ ಜಗತ್ತಿನ ಇತರ ರಾಷ್ಟ್ರಗಳು ಕಲಾಂ ಅವರ ಸಾಧನೆಯನ್ನು ಕೊಂಡಾಡುತ್ತಿವೆ. ಇಲ್ಲಿಯವರೆಗೆ ಎಷ್ಟೋ ಮಂದಿ ಭಾರತದ ರಾಷ್ಟ್ರಪತಿಯಾಗಿ ಹೋಗಿದ್ದಾರೆ, ಆದರೆ ಡಾ. ಸರ್ವಪಲ್ಲಿ ರಾಧಾಕೃಷ್ಣ ಅವರನ್ನು ಬಿಟ್ಟರೆ ಅಬ್ದುಲ್ ಕಲಾಂ ಅವರು ಭಾರತದ ರಾಷ್ಟ್ರಪತಿಯಾಗಿದ್ದರು, ಅನ್ನೋದು ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ. ಕಲಾಂ ಅವರಿಗೆ ಈ ದೇಶದ ಮೇಲಿರುವ ಅಭಿಮಾನ, ಅವರು ಈ ದೇಶಕ್ಕಾಗಿ ಮಾಡಿದ ಸಾಧನೆ ಅವರನ್ನು ಭಾರತದ ಇತಿಹಾಸ ಪುಟದಲ್ಲಿ ಅಚ್ಚಳಿಯದೆ ಉಳಿಯುವಂತೆ ಮಾಡಿದೆ. ಇಂತಹ ಮಹಾನ್ ಚೇತನ ಇತ್ತಿಚೇಗೆ ನಮ್ಮನ್ನಗಲಿದೆ.

ಡಾ. ಅಬ್ದುಲ್ ಕಲಾಂ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, ಅವರಿಗಿದೋ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ.

**– ಡಾ. ಜ್ಯೋತಿ ಸತೀಶ್**

# ಸಂಶೋಧನೆ ಗರುಡ ಗಮನದ ಕೃತಿ

ಸಂಶೋಧನೆ
(ಸಂ) ಡಾ.ಕಮಲಾ ಹಂಪನಾ
ಕ.ಸಾ.ಪ. ಬೆಂಗಳೂರು
೨೦೧೫, ಬೆಲೆ ರೂ. ೨೫೦/-
ಪುಟಗಳು ೨೭೨

ಕನ್ನಡ ಸಾಹಿತ್ಯ ಪರಿಷತ್ತು ನಮ್ಮ ದೇಶದ ಮಹಾನ್ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಒಂದು. ಕನ್ನಡ ನಾಡು ನುಡಿ ಸಾಹಿತ್ಯ ಸಂಸ್ಕೃತಿಯ ಬಲವರ್ಧನೆಗೆ ಶ್ರಮಿಸುತ್ತಾ ಬಂದ ಸಾಹಿತ್ಯ ಪರಿಷತ್ತಿಗೆ ಈಗ ಶತಮಾನದ ಸಂಭ್ರಮ. ಕಳೆದ ನೂರು ವರ್ಷಗಳಲ್ಲಿ ಪರಿಷತ್ತು ಗೈದ ಸಾಂಸ್ಕೃತಿಕ ಪರಿಚಾರಿಕೆ ಉಲ್ಲೇಖನೀಯ ಅಂಶ. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆಯೂ ಅವಿಸ್ಮರಣೀಯವಾದುದು. ಕ.ಸಾ.ಪದ ಬಹುಮುಖೀ ಅಸ್ತಿತ್ವದ ಒಂದು ಪ್ರಧಾನ ಕಾಯಕ್ಷೇತ್ರ ಪುಸ್ತಕ ಪ್ರಕಟಣೆ. ಅದು ಈ ವರೆಗೆ ೧೪೫೦ಕ್ಕೂ ಒಳ್ಳೆಯ ಕೃತಿಗಳನ್ನು ಪ್ರಕಟಿಸಿ ಜ್ಞಾನ ದಾಸೋಹದಲ್ಲಿ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಇದೀಗ, ಪರಿಷತ್ತು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ರಚನೆಯ ಕಾರ್ಯದಲ್ಲಿ ಯಶಸ್ವಿಯಾಗಿರುವುದು ಸಕಾಲಿಕ ಉಪಕ್ರಮವೂ ಆಗಿದೆ. ಹದಿನೇಳು ಸಂಪುಟಗಳಲ್ಲಿ ಸಾಹಿತ್ಯ, ಚರಿತ್ರೆ, ಕಲೆ, ವಿಜ್ಞಾನ, ಮಾನವಿಕ ಬರವಣಿಗೆಯೊಂದಿಗೆ ಹೊರಬರುತ್ತಿರುವುದು ಸ್ತುತ್ಯ ಸಂಗತಿ. ಈ ಮಾಲಿಕೆಯಲ್ಲಿ ಬಂದ ಹನ್ನೊಂದನೆಯ ಸಂಪುಟ ಕನ್ನಡ 'ಸಂಶೋಧನೆ'ಗೆ ಸಂಬಂಧಿಸಿದ್ದಾಗಿದೆ. ಈ ಕೃತಿಯನ್ನು ಹಿರಿಯ ಸಾಹಿತಿಗಳೂ ಸಂಶೋಧಕರೂ ಆಗಿರುವ ನಾಡೋಜ ಪ್ರೊ.ಕಮಲಾ ಹಂಪನಾ ಅವರು ಸಂಪಾದಿಸಿಕೊಟ್ಟಿದ್ದಾರೆ.

ಪ್ರಸ್ತುತ ಕೃತಿಯಲ್ಲಿ ಹನ್ನೊಂದು ಮಂದಿ ವಿದ್ವಾಂಸರು ಕನ್ನಡ ಸಂಶೋಧನೆಯ ಹೆಜ್ಜೆಹಾದಿ, ಅನನ್ಯತೆ, ಏಳು ಬೀಳುಗಳನ್ನು ವಿಸ್ತೃತವಾಗಿ ಚರ್ಚಿಸಿದ್ದಾರೆ. ಸಂಶೋಧನೆಯ ವಿಸ್ತಾರ, ವಿನ್ಯಾಸ, ಸಂಶೋಧನೆ ಮತ್ತು ಅದರ ಪರಿಕಲ್ಪನೆಯಲ್ಲಿ ಆಗಿರುವ ಮಾರ್ಪಾಟುಗಳು, ಸಂಶೋಧನೆಯ ಪಾಶ್ಚಾತ್ಯ ಹಾಗೂ ದೇಶಿ ನೆಲೆಗಳು, ಸಂಶೋಧನೆಯ ಪರಿಕರಗಳು ಹಾಗೂ ಅವುಗಳನ್ನು ಬಳಸಿಕೊಂಡ ಬಗೆ, ಸಂಶೋಧನೆ ಮತ್ತು ಸಂಸ್ಕೃತಿ, ಸಂಶೋಧನ ಬರಹಗಳ ಭಾಷೆ, ಸಮಾಜಶಾಸ್ತ್ರಗಳು ಮತ್ತು ಸಂಶೋಧನೆ, ಕನ್ನಡ ಸಂಶೋಧನೆಗಾಗಿ ರೂಪಿತವಾದ ಸಂಸ್ಥೆಗಳು ಮತ್ತು ಪತ್ರಿಕೆಗಳು, ಕನ್ನಡ ಸಂಶೋಧನೆಯನ್ನು ಕುರಿತಂತೆ ಬಂದಿರುವ ಕೃತಿಗಳ ಪರಿಚಯ ಮತ್ತು ವಿಮರ್ಶೆ, ಸಂಶೋಧನೆಯ ಫಲಶ್ರುತಿ-ಸಮೀಕ್ಷೆ ಈ ಸಂಪುಟದ ಹೂರಣ.

ಕನ್ನಡ ಸಂಶೋಧನೆಗೆ ಹತ್ತಿರ ಹತ್ತಿರ ನೂರೈವತ್ತು ವರ್ಷಗಳ ಇತಿಹಾಸವಿದೆ. ಹದಿನೆಂಟನೆಯ ಶತಮಾನದಲ್ಲಿ ನಮ್ಮ ದೇಶದಲ್ಲಿ ಅಸ್ತಿತ್ವವನ್ನು ಹೊಂದಿದ ಜ್ಞಾನಶಾಖೆಗಳಲ್ಲಿ ಸಂಶೋಧನೆಯೂ ಒಂದು. ವಿದೇಶಿ ವಿದ್ವಾಂಸರೇ ಕನ್ನಡ ಸಂಶೋಧನೆಯ ಆದ್ಯ ಪ್ರವರ್ತಕರು. ಕರ್ನಾಟಕದ ಭವ್ಯ ಪರಂಪರೆ ಹಾಗೂ ಸಾಂಸ್ಕೃತಿಕ ಸ್ವರೂಪಗಳ ವಿಚಾರ ಲೋಕಮುಖವಾದುದು ಸಂಶೋಧನೆಯಿಂದ ಎಂಬುದರಲ್ಲಿ ಎರಡು ಮಾತಿಲ್ಲ.

ಸಂಶೋಧನೆಯ ವಿಸ್ತಾರ-ವಿನ್ಯಾಸ ಈ ಕೃತಿಯ ಮೊದಲ ಲೇಖನ. ಇದು ಡಾ. ಕಮಲಾ ಹಂಪನಾ ಅವರ ಲೇಖನ. ಇದು ಅನೇಕ ದೃಷ್ಟಿಯಿಂದ ನಮ್ಮ ಗಮನ ಸೆಳೆಯುತ್ತದೆ. ಸಂಶೋಧನೆಯೆಂಬ ಪರಿಕಲ್ಪನೆಯ ಆಯಾಮ, ಅನನ್ಯತೆ, ರೂಪ, ಸ್ವರೂಪ, ಆದರ್ಶ, ಸ್ಥಳೀಯ ಅಸ್ಮಿತೆಗೆ, ನೆಲದ ಮರೆಯ ನಿಧಾನದ ಗುರುತಿಸುವಿಕೆಗೆ ದಾರಿ ಹೆದ್ದಾರಿ ನಿರ್ಮಿಸಿದವರ ಸಾಹಸ ಸಾಧನೆಯ ಸ್ಮರಣೆಯೂ ಇಲ್ಲಿ ದಾಖಲಾಗಿದೆ. ಸ್ವತಃ ಉತ್ತಮ ಸಂಶೋಧಕರಾಗಿರುವ ಡಾ. ಕಮಲಾ ಹಂಪನಾ ಅವರು ಇಲ್ಲಿ ಕನ್ನಡ ಸಂಶೋಧನೆ ರೂಪನಿಷ್ಠತೆಯಿಂದ ಗುಣ ನಿಷ್ಠತೆಯತ್ತ ಹೊರಳಿ ಕನ್ನಡಮುಖಿ, ಕರ್ನಾಟಕ ಮುಖಿ, ಜನಮುಖಿ ಮತ್ತು ಸಂಸ್ಕೃತಿಮುಖಿಯಾಗಿ ಹಬ್ಬಿದ ಬಗೆಯನ್ನು ಸೋದಾಹರಣವಾಗಿ ವಿಶ್ಲೇಷಿಸಿದ್ದಾರೆ. 'ಸಂಶೋಧನೆ ಬಹುರೂಪಿಯೂ ಬಹುವ್ಯಾಪಿಯೂ ಆದುದು. ಅದು ಸೃಷ್ಟಿ, ಸಮಸ್ತವನ್ನೂ ತನ್ನ ತೋಳ ತೆಕ್ಕೆಗೆ ಆತುಕೊಳ್ಳುತ್ತದೆ. ಸಂಶೋಧನೆಯನ್ನು ಸೃಜನೇತರ ಸಾಹಿತ್ಯ ಪ್ರಕಾರವೆಂದು ಪರಿಗಣಿಸಲಾಗುತ್ತಿದೆ. ಸಂಶೋಧನೆಯೂ ಸೃಜನಸಾಹಿತ್ಯದ ಇನ್ನೊಂದು ಮಗ್ಗುಲು. ಇದನ್ನು ಸೃಜನಶೀಲ ವಿದ್ವತ್ತು (Creative Scholarship) ಎಂದು ಪರಿಗಣಿಸುವುದು ಸಮಂಜಸ. ಕಾವ್ಯ, ನಾಟಕ, ಕಥೆ, ಕಾದಂಬರಿ ವಿಮರ್ಶೆಗಳ ರೀತಿ ಸಂಶೋಧನೆಯೂ ಒಂದು ಮುಖ್ಯ ಜ್ಞಾನವಾಹಿನಿ. ಮೌಲಿಕ ಸಂಶೋಧನೆಯು ಒಳಗಣ್ಣನ್ನು ತೆರೆಸಿ ನನ್ನಿಯನು ಕಾಣುವ, ಕಿವಿತೆರೆದು ನಿಜದನಿಯನ್ನು ಆಲಿಸುವ ಎಚ್ಚರದ ಹುಡುಕಾಟ' ಎಂಬ ಅವರ ಮಾತುಗಳು ವಿಚಾರ ಪರಿಪ್ಲುತವಾಗಿವೆ.

ಡಾ.ಜಿ.ಎನ್. ಉಪಾಧ್ಯ

ಸಂಶೋಧನೆ ಇಂದು ತನ್ನ ಗಾಂಭೀರ್ಯವನ್ನು ಕಳೆದುಕೊಳ್ಳುತ್ತಿರುವುದು, ಈ ಕ್ಷೇತ್ರದಲ್ಲಿನ ನೈತಿಕ ದಿವಾಳಿತನ ಸಂಶೋಧನೆಯ ವಾತಾವರಣ ಮತ್ತು ಇರುವ ವಾಸ್ತವ ಪರಿಸ್ಥಿತಿಯನ್ನು ನೆನೆದು ಅವರಿಲ್ಲಿ ಖೇದ ವ್ಯಕ್ತಪಡಿಸಿದ್ದಾರೆ. ಕನ್ನಡ ಸಂಶೋಧನೆ ಭವಿಷ್ಯಮುಖಿಯಾಗಿ ಸಾಗಬೇಕಾದ ಪ್ರಕ್ರಿಯೆಯಲ್ಲಿ ತುರ್ತಾಗಿ ಕೈಗೊಳ್ಳಬೇಕಾದ ವಿಷಯಗಳನ್ನು ಚರ್ಚಿಸಿರುವುದು ಅವಲೋಕನೀಯವಾಗಿದೆ.

ಸಂಶೋಧನ ಬರಹಗಳ ಭಾಷೆ(ಸೋಮಶೇಖರ ಗೌಡ), ಸಂಶೋಧನೆ ಮತ್ತು ಸಂಸ್ಕೃತಿ(ತಾಳ್ತಜೆ ವಸಂತಕುಮಾರ್), ಕನ್ನಡ ಸಂಶೋಧನೆಗೆ ಶ್ರಮಿಸಿದ ಸಂಸ್ಥೆಗಳು ಪತ್ರಿಕೆಗಳು(ಸಂಗಮೇಶ ಸವದತ್ತಿಮಠ), ಸಂಶೋಧನೆಯ ಪರಿಕರಗಳು(ಎಂ.ಜಿ. ಮಂಜುನಾಥ್), ಲೇಖನಗಳು ಹೊಸ ಹೊಸ ಒಳನೋಟ ಮೌಲ್ಯಮಾಪನಗಳಿಂದ ಕೂಡಿವೆ. ಒಟ್ಟಿನಲ್ಲಿ ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಸಂಶೋಧನೆಯು ಒಂದು ಗಂಭೀರ ಅಧ್ಯಯನ ಶಿಸ್ತಾಗಿ ಬೆಳೆದು ಬಂದ ಪರಿಯನ್ನು ಅರಿಯಲು ಈ ಸಂಪುಟ ಉಪಯುಕ್ತವಾಗಿದೆ. ಸಂಶೋಧನೆ ಕ್ಷೇತ್ರದಲ್ಲಿ ಹೊರಟವರಿಗೆ ಇದೊಂದು ಪಥನಿರ್ದೇಶನ ಮಾಡುವ ಕೃತಿಯಾಗಿಯೂ ಮುಖ್ಯವಾಗುತ್ತದೆ. ಇಂಥ ಒಂದು ಶಾಸ್ತ್ರೀಯ ಅವಲೋಕನದ ಕೃತಿಯನ್ನು ಸಹೃದಯರ ಕೈಗಿತ್ತ ಸಾಹಿತ್ಯ ಪರಿಷತ್ತು ಹಾಗೂ ಸಂಪಾದಕರಾಗಿ ಸಂಶೋಧನ ಗಡಣಕ್ಕೆ ಮುನ್ನೋಟವನ್ನು ಬೀರಿದ ಡಾ. ಕಮಲಾ ಹಂಪನಾ ಅವರ ಶ್ರಮ ಸಾರ್ಥಕವಾಗಿದೆ.

## ಮಲ್ಲಿಗೆ

ಮಲ್ಲಿಗೆ ಬಳ್ಳಿಯು
ಝಳದಿ ಕಮರಿ
ಚಳಿಯಲಿ ಪುಳಕಗೊಂಡು
ಮಳೆ ನೀರಿನಲಿ
ಅರಳರಳಿ ಮುಗುಳ್ನಕ್ಕಿತು

## ರಂಗವಲ್ಲಿ

ಹೃದಯಂಗಳದಿ
ಅರಳಿದಾಗ
ಪ್ರೀತಿ ರಂಗವಲ್ಲಿ
ರಂಗು ರಂಗಿನ
ಎಲ್ಲೆಲ್ಲೂ ಸುಂದರ ಹೋಳಿ!

*- ಶೋಭಾ ಪ್ರಮೋದ್*

# ಶ್ರೀಮತಿ ಸಾವಿತ್ರಮ್ಮ ದೇ. ಜವರೇಗೌಡ

ಮೈಸೂರು ವಿಶ್ವವಿದ್ಯಾನಿಲಯ ಕನ್ನಡದ ಒಂದು ಮಹಾಮನೆ! ಆಚಾರ್ಯ ಶ್ರೀಯವರು ಕೊಟ್ಟ ದೀಕ್ಷೆಯನ್ನು ಅತ್ಯಂತ ನಿಷ್ಠೆಯಿಂದ ಮುಂದುವರೆಸಿದವರು ರಾಷ್ಟ್ರಕವಿ ಕುವೆಂಪು ಅವರು. ಅವರ ಶಿಷ್ಯರಂತೂ ಈ ಕನ್ನಡ ದೀಕ್ಷೆಯನ್ನು ಕಠೋರವಾಗಿ ತೊಟ್ಟವರೇ. ಪ್ರಾಧ್ಯಾಪಕ ಜವರೇಗೌಡ ಅಂತಹ ಕನ್ನಡ ವ್ಯಕ್ತಿಗಳಲ್ಲಿ ಒಬ್ಬರು. ಕನ್ನಡವೇ ತಮ್ಮ ಉಸಿರೆನ್ನುವವರು. ಈ ಕನ್ನಡ ವ್ರತಿಯ ಪತ್ನಿಯಾಗಿ ಶ್ರೀಮತಿ ಸಾವಿತ್ರಮ್ಮನವರು ಕನ್ನಡದ ಒಂದೊಂದು ಮುನ್ನಡೆಯನ್ನೂ ತಮ್ಮೇದೇ ಮುನ್ನಡೆಯಂತೆ ವೀಕ್ಷಿಸುತ್ತಾರೆ.

ಕನ್ನಡಾಭಿಮಾನಿ

"ಕನ್ನಡವೇ ಜವರೇಗೌಡರು, ಜವರೇಗೌಡರೇ ಕನ್ನಡ" ಎನ್ನುವ ಇಂಪಾದ ನುಡಿಗಿಂತಲೂ "ಕನ್ನಡವೇ ಜವರೇಗೌಡ ದಂಪತಿಗಳು, ಜವರೇಗೌಡ ದಂಪತಿಗಳೇ ಕನ್ನಡ" ಎಂದರೆ ಅರ್ಥಗರ್ಭಿತವಾದ ಸೂಕ್ತಿಯಾಗುತ್ತದೆ. ಪ್ರಾಧ್ಯಾಪಕ ಜವರೇಗೌಡರು ಕಾಲೇಜಿನಲ್ಲಿ ಓದಿ ಎಂ.ಎ. ಪದವೀಧರರಾದರೆ ಶ್ರೀಮತಿ ಸಾವಿತ್ರಮ್ಮನವರು ಮನೆಯಲ್ಲಿನ ಪುಸ್ತಕ ಭಂಡಾರವನ್ನು ಉಪಯೋಗಿಸಿಕೊಂಡು ಎಂ.ಎ. ಪದವೀಧರರಷ್ಟೇ ಜ್ಞಾನಾರ್ಜನೆ ಮಾಡಿಕೊಂಡಿದ್ದಾರೆ. ಮಾತೃಭಾಷೆಯಾದ ಕನ್ನಡದಲ್ಲಿ ಅತ್ಯಂತ ಆಸಕ್ತಿ ಅಭಿಮಾನಗಳನ್ನು ತಳೆದಿರುವ ಸಾವಿತ್ರಮ್ಮನವರು ಪ್ರಾಧ್ಯಾಪಕ ಜವರೇಗೌಡರಿಗೆ ತಕ್ಕ ಪತ್ನಿ. ಸಾವಿತ್ರಮ್ಮನವರು ಓದದೇ ಇರುವ ಪುಸ್ತಕಗಳಿಲ್ಲ. ಪ್ರಾಧ್ಯಾಪಕ ಮನೆಗೆ ಬರುವ, ಅವರೇ ತರುವ ಎಲ್ಲಾ ಪುಸ್ತಕಗಳನ್ನು ಶ್ರೀಮತಿಯವರು ಓದದೆ ಬೀರುವಿಗೆ ಸೇರಿಸುವುದಿಲ್ಲ. ಈ ಗುಣದಿಂದ "ನನಗಿಂತಲೂ ಆಕೆಯೇ ಹೆಚ್ಚು ಪುಸ್ತಕಗಳನ್ನು ಓದಿದ್ದಾಳೆ. ಆಕೆ ಒಳ್ಳೆಯ ಓದುಗಳು, ಸಹೃದಯಳು" ಎಂಬ ಪ್ರಾಧ್ಯಾಪಕರ ಮೆಚ್ಚುಗೆಯ ಮಾತುಗಳಿಗೆ ಸಾವಿತ್ರಮ್ಮನವರು ಪಾತ್ರರಾಗಿದ್ದಾರೆ.

ಕನ್ನಡಿಗರನ್ನು ಕಂಡರೆ ಸಾವಿತ್ರಮ್ಮನವರಿಗೆ ಬಲುಪ್ರೀತಿ. ಕನ್ನಡ ಮಾತನಾಡುವುದನ್ನು ಕೇಳಿದರೆ ಸಂತಸದಿಂದ ಮುಖ ಅರಳುತ್ತದೆ. ಕನ್ನಡಕ್ಕಾಗಿ ದುಡಿಯುವವರ ಬಗ್ಗೆ ಅವರಿಗೆ ಅಪಾರ ಗೌರವ ಹಾಗೂ ಅಭಿಮಾನ. "ಕನ್ನಡಿಗರಲ್ಲಿ ಅನೇಕರಿಗೆ ಮಾತ್ರ ಭಾಷಾಪ್ರೇಮವಿಲ್ಲ" ಎಂದು ಅವರು ನೊಂದು ನುಡಿಯುತ್ತಾರೆ. ಇದಕ್ಕೆ ಪೋಷಕವೆಂಬಂತೆ ಪ್ರಾಧ್ಯಾಪಕ ಜವರೇಗೌಡರು "ನನಗಿಂತಲೂ ನನ್ನಾಕೆಗೆ ಕನ್ನಡದ ಅಭಿಮಾನ ಹೆಚ್ಚಾಗಿದೆ" ಎಂದು ಹೆಮ್ಮೆಯಿಂದ ಹೇಳುತ್ತಾರೆ. ಆ ಮಾತಿನ ಜೊತೆಯಲ್ಲಿಯೇ ಅಂಥ ಮಡದಿಯನ್ನು ಪಡೆದ ಸಂತೃಪ್ತಿಯ ಮಂದಹಾಸ ಅವರ ಮೊಗದಲ್ಲಿ ಮಿನುಗುತ್ತದೆ.

ಕನ್ನಡಿಗರಿಗಾಗಿ, ಕನ್ನಡಕ್ಕಾಗಿ, ಅಹರ್ನಿಶಿ ದುಡಿಯುತ್ತಿರುವ ಜವರೇಗೌಡರಿಗೆ ಸಾವಿತ್ರಮ್ಮನವರು ಸಂಸಾರದ ಯಾವ ತಾಪತ್ರಯವನ್ನೂ ಕೊಡಲು ಇಚ್ಛಿಸದೆ, ಸಂಪೂರ್ಣ ಹೊಣೆಯನ್ನು ಅವರೇ ಹೊತ್ತಿದ್ದಾರೆ. ಪತಿಯ ಎಲ್ಲ ಕೆಲಸಗಳಲ್ಲಿಯೂ ಸಂಪೂರ್ಣ ಸಹಕಾರ ನೀಡುವುದಲ್ಲದೆ, ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಾ ಶಕ್ತಿ ತುಂಬುತ್ತಾ ಚೈತನ್ಯದಾಯಿನಿ ಯಾಗಿದ್ದಾರೆ.

**ಸತ್ಕಾವ್ಯಸಂಗ**

ಸಾವಿತ್ರಮ್ಮನವರು ಚನ್ನಪಟ್ಟಣ ತಾಲ್ಲೂಕು ತಿಮ್ಮಸಂದ್ರದ ಅಪ್ಪಾಜಿಗೌಡರ ಹಾಗೂ ದೇವಮ್ಮನವರ ಮಗಳು, ಮೂರು, ನಾಲ್ಕು ಹಳ್ಳಿಗಳಿಗೆ ಪಟೇಲರಾಗಿದ್ದ ಅಪ್ಪಾಜಿಗೌಡರು ಅತ್ಯಂತ ಕಲಾಭಿಮಾನಿಗಳು. ಅನೇಕ ನಾಟಕಗಳಲ್ಲಿ ಭಾಗವಹಿಸಿ, ಒಳ್ಳೆಯ ಅಭಿನಯವನ್ನು ನೀಡುತ್ತಿದ್ದರು. ಇಂದಿಗೂ, ಎಂಭತ್ತು ವರುಷಗಳಾಗಿದ್ದರೂ, ಕಂಠ ಬಹಳ ಮಧುರವಾಗಿದ್ದು ಸೊಗಸಾಗಿ, ಇಂಪಾಗಿ ಹಾಡುತ್ತಾರೆ. ಅಪ್ಪಾಜಿಗೌಡರ ತಮ್ಮ ಮಾದೇಗೌಡರು ಸಹ ಸಾಹಿತ್ಯಾಭಿಮಾನಿಗಳು. ರಾಮನಗರದಲ್ಲಿ ವಕೀಲರಾಗಿದ್ದು ಇವರು ಎಂ.ಎಲ್.ಎ. ಸಹ ಆಗಿದ್ದು ಒಳ್ಳೆಯ ರಾಜಕೀಯ ಧುರೀಣರಾಗಿದ್ದಾರೆ. ಈ ಅಣ್ಣ ತಮ್ಮಂದಿರ ಪ್ರಭಾವ ಸಾವಿತ್ರಮ್ಮನವರ ಮೇಲೆ ವಿಶೇಷವಾಗಿ ಆಗಿದೆ. ಸಾವಿತ್ರಮ್ಮನವರು ಚಿಕ್ಕವರಿದ್ದಾಗ ಇವರ ಚಿಕ್ಕಪ್ಪನವರಾದ ಮಾದೇಗೌಡರು ಜೈಮಿನಿ ಭಾರತ, ಭಾಗವತ, ರಾಮಾಯಣ, ವ್ಯಾಸಭಾರತ, ಕುಮಾರವ್ಯಾಸಭಾರತ, ಭಗವದ್ಗೀತೆ ಮೊದಲಾದ ಗ್ರಂಥಗಳನ್ನೂ ಪುಟ್ಟಪ್ಪನವರ ಯಮನಸೋಲು ಮುಂತಾದ ಶ್ರೇಷ್ಠ ಕೃತಿಗಳನ್ನೂ ಪುಟ್ಟಪ್ಪನವರ ಯಮನಸೋಲು ಮುಂತಾದ ಶ್ರೇಷ್ಠ ಕೃತಿಗಳನ್ನೂ ಚೆನ್ನಾಗಿ ಓದಿ, ಅರ್ಥ ಹೇಳುತ್ತಿದ್ದರಂತೆ. ಇವರು ಸಾವಿತ್ರಮ್ಮನವರಿಗೆ ಭಗವದ್ಗೀತೆಯನ್ನು ಕಂಠಪಾಠ ಮಾಡಿಸಿದರಂತೆ. ಇದರಿಂದ ಪ್ರಭಾವಿತರಾದ ಶ್ರೀಮತಿಯವರಿಗೆ ಅಂದಿನಿಂದಲೇ ಒಳ್ಳೆಯ ಪುಸ್ತಕಗಳನ್ನು ಯಾವಾಗಲೂ ಓದುವ ಅಭ್ಯಾಸವಾಯಿತು, ಮನಸ್ಸು ಜ್ಞಾನಾರ್ಜನೆಗಾಗಿ ಹಾತೊರೆಯುವಂತಾಯಿತು....

**ಹಿರಿಯರ ಪ್ರಭಾವ**

ಎಲ್.ಎಸ್.ವರೆಗೂ ಓದಿದ ಸಾವಿತ್ರಮ್ಮನವರಿಗೆ ಮುಂದೆ ಓದಲು ಅನಾನುಕೂಲವಾದರೂ ಮನೆಯಲ್ಲಿ ಅವರ ತಾಯಿ ಹಾಗೂ ಸೋದರತ್ತೆ ಗೌರಮ್ಮನವರಿಂದ ಸಂಸಾರದಲ್ಲಿ ಒಳ್ಳೆಯ ಗೃಹಿಣಿಯಾಗಲು ಬೇಕಾದ ಯೋಗ್ಯವಾದ ವಿದ್ಯೆ ದೊರೆಯಿತು. ಇವರ ಸೋದರತ್ತೆಯವರು ಅಡಿಗೆಯಿಂದ ಹಿಡಿದು ದೇವರ ಪೂಜೆಯವರೆಗೂ ಹೆಣ್ಣುಮಕ್ಕಳು ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ತಿಳಿಸುತಿದ್ದರು, ತಿದ್ದುತ್ತಿದ್ದರು. ಭಕ್ತ ಪಂಥದವರಾದ ಇವರು ಆಯುರ್ವೇದದ ಔಷಧಿಗಳನ್ನು ತಯಾರಿಸಿಕೊಡುವುದರ ಮೂಲಕ ಸುತ್ತಮುತ್ತಲಿನ ಜನರಿಗೆ ಒಬ್ಬ ಒಳ್ಳೆಯ ವೈದ್ಯರೇ ಆಗಿದ್ದರು. ದೈವಭಕ್ತರಾದ ಇವರಿಗೆ ಧಾರ್ಮಿಕ ಜೀವನದಲ್ಲಿ, ಹಬ್ಬ ಹರಿದಿನಗಳಲ್ಲಿ ಬಹಳ ನಂಬಿಕೆಯಿದ್ದು, ನಿಷ್ಠೆಯಿಂದ ನಡೆಸಿಕೊಂಡು ಬರುತ್ತಿದ್ದರು. ಇವರ ಸಂಪೂರ್ಣ ಮಾರ್ಗದರ್ಶನದಲ್ಲಿ ನಡೆದ ಶ್ರೀಮತಿ ಸಾವಿತ್ರಮ್ಮನವರು ದೇವರಲ್ಲಿ ಭಕ್ತಿ, ಧರ್ಮದಮಾರ್ಗ, ಸತ್ಯದ ನುಡಿ, ಉತ್ತಮ ನಡೆ– ಇವುಗಳಿಂದ ಶೋಭಿಸಿದ್ದಾರೆ. ಸಂಪ್ರದಾಯದಿಂದ ಬಂದ ಹಬ್ಬ ಹರಿದಿನಗಳ ಆಚರಣೆಯಲ್ಲಿ ಹೆಚ್ಚು ಶ್ರದ್ಧೆ, ಬಹಳ ಭಕ್ತಿಯಿಂದ ನಡೆಸಿಕೊಂಡು ಬಂದಿದ್ದಾರೆ. ಸೋದರತ್ತೆಯೇ ತಾಯಿಯ ಸ್ಥಾನದಲ್ಲಿ ನಿಂತು ಅಣ್ಣನ ಮಕ್ಕಳಿಗೆ ಉತ್ತಮ ಮಾರ್ಗದರ್ಶನ ನೀಡಿದ್ದಾರೆ. ಚಿಕ್ಕಪ್ಪನವರಾದ ಮಾದೇಗೌಡರೂ ಅಣ್ಣನ ಮಕ್ಕಳಿಗೆ ನೀತಿ ರೀತಿಗಳನ್ನು ಉಪದೇಶಿಸಿ, ಜ್ಞಾನಾರ್ಜನೆಗೆ ದಾರಿ ಬೆಳಕನ್ನು ತೋರಿಸಿದ್ದಾರೆ. ಇಂಥ ಆದರ್ಶಗುಣಗಳನ್ನು ಹೊಂದಿದ್ದ ಇವರುಗಳ ಪ್ರಭಾವವು ಸಾವಿತ್ರಮ್ಮನವರಿಗೆ ಉತ್ತಮ ಗೃಹಿಣಿಯಾಗಲು, ಒಳ್ಳೆಯ ಓದುಗರಾಗಲು ಹೆಚ್ಚು ಸಹಾಯವನ್ನುಂಟುಮಾಡಿತು.

ಸಾವಿತ್ರಮ್ಮನವರ ಒಡಹುಟ್ಟಿದವರು ಒಟ್ಟು ಹದಿಮೂರು ಜನ. ಜೊತೆಗೆ ಮನೆಯಲ್ಲಿ ಎಂಟು ಹತ್ತು ಜನ ಕೆಲಸದ ಆಳುಗಳು. ಅವಿಭಕ್ತ ಕುಟುಂಬ. ಮನೆಯಲ್ಲಿ ಇರುವವರಿಗೆಲ್ಲಾ ಕೈತುಂಬ ಕೆಲಸ. ಈ ರೀತಿಯ ವಾತಾವರಣದಲ್ಲಿ ಬೆಳೆದ ಸಾವಿತ್ರಮ್ಮನವರಿಗೆ ಸೋಮಾರಿತನ ದೂರವಾಯಿತು. ಅದರಿಂದಾಗಿ ಮಧ್ಯಾಹ್ನದ ಹೊತ್ತು ಮಲಗುವ ದುರಭ್ಯಾಸವೂ ಅವರಿಗೆ ಅಂಟಲಿಲ್ಲ. ಚಟುವಟಿಕೆ ಇವರಲ್ಲಿ ಮನೆಮಾಡಿತು. ಶಿಸ್ತು, ಸಂಯಮ ಇವುಗಳ ರಕ್ತಗತವಾಗಿ ಬಂದಿವೆ. ಮಣಿ ತೋರಣ, ಹೊಲಿಗೆ, ವುಲ್ಲನ್ ಕೆಲಸ, ಕ್ರೋಶಾ, ಕಸೂತಿ ಕೆಲಸಗಳಲ್ಲಿ ಹೆಚ್ಚಿನ ಆಸಕ್ತಿಯಿದ್ದು ಅವುಗಳನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಸಾಕಷ್ಟು ಸಂಗೀತದ ಅಭ್ಯಾಸವೂ ಆಗಿದೆ. ಆಡಂಬರದ ಜೀವನಕ್ಕೆ ಮನಸೋಲದ

ಇವರು ನಯ, ವಿನಯ, ಸೌಜನ್ಯಗಳ ತವರೂರಾಗಿದ್ದಾರೆ ಹೆಣ್ಣು ಮಕ್ಕಳಿಗೆ ಸಹಜವಾಗಿ ಇರಬೇಕಾದ ಸಂಕೋಚ, ಲಜ್ಜೆ ಇವರಲ್ಲಿ ಮನೆಮಾಡಿಕೊಂಡಿವೆ.

**ಆರಿಸಿದ ಪತಿ**

ಶ್ರೀಮತಿಯವರು ತಮ್ಮ ಚಿಕ್ಕವಯಸ್ಸಿನಲ್ಲಿಯೇ "ಓದಿದ ಹುಡುಗನನ್ನು' ಮದುವೆಯಾಗಬೇಕೆಂದು ಸಂಕಲ್ಪಸಿದರು. ಅದಕ್ಕಾಗಿ ಅವರು ತಂಗಿಯ ಮದುವೆ ಆದರೂ ಸಗ್ಗಲಿಲ್ಲ. ಅನಂತರ ಅವರ ಹತ್ತೊಂಬತ್ತನೆಯ ವಯಸ್ಸಿನಲ್ಲಿ 1942ರಲ್ಲಿ ಜವರೇಗೌಡರೊಡನೆ ಅತ್ಯಂತ ವಿಜೃಂಭಣೆಯಿಂದ ಮೂರು ದಿವಸಗಳ ವಿವಾಹ ನೆರವೇರಿತು. ಸ್ವಲ್ಪ ಕಾದರೂ ಒಳ್ಳೆಯ ಪತಿಯನ್ನು ಪಡೆದ ಸಂತಸ ಇಂದಿಗೂ ಸಾವಿತ್ರಮ್ಮನವರ ಜೀವನದಲ್ಲಿ ಲಾಸ್ಯವಾಡುತ್ತಿದೆ. ಪ್ರಾಧ್ಯಾಪಕ ಜವರೇಗೌಡರು "ನನ್ನನೇ ಮದುವೆ ಆಗಬೇಕೆಮ್ದು ಈಕೆ ತಪಸ್ಸನ್ನು ಮಾಡುತ್ತಿದ್ದಳು" ಎಂದು ಹಾಸ್ಯ ಚಟಾಕಿಯನ್ನೇ ಹಾರಿಸಿ, ಸಾವಿತ್ರಮ್ಮನವರಿಗೆ "ಅಲ್ವೇನೇ" ಎಂಬ ಪ್ರಶ್ನೆ ಹಾಕುತ್ತಾರೆ. ಪತಿಯ ಈ ಪ್ರಶ್ನೆಗೆ "ಹೌದು" ಎಂಬಂತೆ ಮುಗುಳ್ನಗೆಯಿಂದಲೇ ಉತ್ತರಿಸುತ್ತಾರೆ, ಸಾವಿತ್ರಮ್ಮನವರು ಮಾವನವರು ದೇವೇಗೌಡರು ಸಾವಿತ್ರಮ್ಮನವರ ಅತ್ತೆ ಚನ್ನಮ್ಮನವರು. ಅವರ ಸ್ಥಳ ಚನ್ನಪಟ್ಟಣದ ತಾಲ್ಲೂಕು ಚಕ್ಕೆರೆ.

ಪತಿಯ ಮನೆಯನ್ನು ಪ್ರವೇಶಿಸಿದ ಸಾವಿತ್ರಮ್ಮನವರಿಗೆ ಮನೆಯೇ ಸರ್ವಸ್ವವಾಯಿತು. ಮನೆಯಲ್ಲಿ ಓದುವುದಕ್ಕಾಗಿ ದೂರ ಹತ್ತಿರ ಬಂಧುಗಳ ಕಡೆಯಿಂದ ಬಂದ ಅನೇಕ ಹುಡುಗರು ಇದ್ದು, ಅವರಿಗೆಲ್ಲಾ ಅಡಿಗೆ ಮಾಡಿ ಬಡಿಸಿ, ತಮ್ಮ ಮಕ್ಕಳಂತೆ ಪ್ರೀತಿಯಿಂದ ಕಂಡುಕೊಂಡು ಬಂದರು. ಇಂದಿಗೂ ಅವರ ಮನೆ ಒಂದು ಪುಟ್ಟ ವಿದ್ಯಾರ್ಥಿನಿಲಯವೇ ಆಗಿದೆ. ಜೊತೆಗೆ ಜನಪ್ರಿಯರಾದ ಕನ್ನಡದ ಸೇನಾನಿ ಜವರೇಗೌಡರು ಇದ್ದಕ್ಕಿದ್ದಂತೆ ಎಂಟು, ಹತ್ತು ಜನರನ್ನು ತಮ್ಮ ಮನೆಗೆ ನೇರವಾಗಿ ಊಟಕ್ಕೆ, ತಿಂಡಿಗೆ ಕರೆದುಕೊಂಡು ಬರುತ್ತಿರುತ್ತಾರೆ. ತೆಳ್ಳಗೆ, ಬೆಳ್ಳಗೆ ಇರುವ ಕೋಮಲ ಕಾಯಳಾದ ಸಾವಿತ್ರಮ್ಮನವರಿಗೆ ಇದರಿಂದ ಸ್ವಲ್ಪ ಪ್ರಯಾಸವಾದರೂ "ಅವರುಗಳು ತಮ್ಮ ಮನೆಗೆ ಬಂದರೆ ಅದೇ ದೊಡ್ಡದು" ಎಂದು ಭಾವಿಸಿ ನಗುಮೊಗದಿಂದ ಅತಿಥಿ ಸತ್ಕಾರಕ್ಕೆ ತೊಡಗುತ್ತಾರೆ. ಜಾತೀಯತೆಯ ಗ್ರಾಮ್ಯವಾತಾವರಣದಲ್ಲಿ ಬೆಳೆದ ಸಾವಿತ್ರಮ್ಮನವರು ಪತಿಯ ಮನೆಗೆ ಬಂದ ಕೆಲವೇ ತಿಂಗಳುಗಳಲ್ಲಿ ಮನೆಗೆ ಯಾವ ಜಾತಿಯವರು ಬಂದರೂ ಅವರನ್ನು ಮಾತನಾಡಿಸಿ, ಸಹಪಂಕ್ತಿಯಲ್ಲಿ ಊಟಕ್ಕೆ ಬಡಿಸಿ, ಒಳ್ಳೆಯ ಮಾತುಗಳನ್ನಾಡಿ ಕಳಿಸುವಷ್ಟರ ಮಟ್ಟಿಗೆ ಮಾರ್ಪಾಡು ಹೊಂದಿ ಹೊಸದೃಷ್ಟಿಯನ್ನು ಪಡೆದುಕೊಂಡರು. ಈ ಪರಿವರ್ತನೆ ಅವರ ಯಜಮಾನರ ಮನಸ್ಸಿಗೆ ಹೆಚ್ಚಿನ ಆನಂದವನ್ನುಂಟು ಮಾಡಿತು.

ಶ್ರೀಮತಿಯವರು ಮನೆಯ ಕೆಲಸವನ್ನೆಲ್ಲಾ ಮುಗಿಸಿ, ಜವರೇಗೌಡರು ಸಾಹಿತ್ಯದ ಬರವಣಿಗೆಯಲ್ಲಿ ತೊಡಗಿರುವಾಗ, ಅವರ ಸಮೀಪದಲ್ಲಿಯೇ ಕುಳಿತು ಅವರು ಬರೆಯುತ್ತಿರುವ ಒಂದೊಂದು ಪಾದವನ್ನೂ ಓದುತ್ತಾ ಸಂತೋಷದಿಂದ ಅವರ ಕೆಲಸಕ್ಕೆ ನೆರವಾಗುತ್ತಾರೆ. ಪತಿಯ ಬರಹದ ಹಸ್ತಪ್ರತಿಯನ್ನು ಮೊಟ್ಟಮೊದಲು ಓದುವವರೇ ಸಾವಿತ್ರಮ್ಮನವರು. ಪತಿಯ ಬರಹವನ್ನೆಲ್ಲಾ ಮೆಚ್ಚಿದ್ದಾರೆ. ಹೀಗಾಗಿ ಅವರು ಒಳ್ಳೆಯ ಸಹೃದಯರು, ಜೊತೆಗೆ ಅಷ್ಟೇ ಉತ್ತಮ ವಿಮರ್ಶಕರು.

**ಜನಪದ ಸಾಹಿತ್ಯಪ್ರೀತಿ**

ಸಾವಿತ್ರಮ್ಮನವರಿಗೆ ಕೆಲವು ಸಾಹಿತಿಗಳ ಪರಿಚಯ ನೇರವಾಗಿ ಆದರೆ, ಇನ್ನು ಕೆಲವರ ಪರಿಚಯ ವರ ಕೃತಿಗಳ ಮೂಲಕ ಅಗಿದೆ. ಶ್ರೀಮತಿಯವರಿಗೆ ಜನಪದ ಸಾಹಿತ್ಯದಲ್ಲಿ ಅಪಾರ ಒಲವು. ಆ ಒಲವು ಎಷ್ಟು ಆಳವಾಗಿದೆ ಎಂದರೆ ಜನಪದ ಗೀತೆಗಳನ್ನು ಹಾಡುವವರು, ಹಳ್ಳೀಯ ಕಡೆಯವರು ಮನೆಗೆ ಬಂದರೆ ಅವರಿಂದ ಪದಗಳನ್ನು ಹಾಡಿಸಿ, ಅನೇಕ ಪದಗಳನ್ನು ಸಂಗ್ರಹಿಸಿದ್ದಾರೆ. ಅವರು ಸಂಗ್ರಹಿಸಿರುವ ಅಪೂರ್ವ ಪದಗಳು ಅಚ್ಚಾಗಿ ಹೊರಗೆ ಬರಬೇಕಷ್ಟೆ.

**ಸಾಹಿತ್ಯದ ನೆಲೆಮನೆ**

ಪ್ರೊಫೆಸರ್ ಜವರೇಗೌಡ ಆಗಾಗ್ಗೆ ಕೊಡುವ ಸತ್ಕಾರ ಸನ್ಮಾನ ಸಮಾರಂಭಗಳಿಗೆ ಸಾವಿತ್ರಮ್ಮನವರು ಹೋದರೂ ಅಲ್ಲಿ ಮುಂದೆ ಕುಳಿತುಕೊಳ್ಳದೆ, ನಾಚಿಕೆ ಸಂಕೋಚಗಳಿಂದ ಹಿಂದೆಯೇ ಕುಳಿತುಕೊಳ್ಳುತ್ತಾರೆ. ಆ ಸಮಾರಂಭದ ಪ್ರೇಕ್ಷಕರ ಚಿತ್ರಪಟಗಳನ್ನು ನೋಡಿದರೆ, ಅಲ್ಲಿ ನಾಚಿಕೆಯಿಂದ ತಲೆ ತಗ್ಗಿಸಿ ಕುಳಿತಿರುತ್ತಾರೆ ಶ್ರೀಮತಿಯವರು. ಮನೆಯಲ್ಲಿಯೇ ಇದ್ದುಕೊಂಡು ಸಾಹಿತ್ಯ ಸೇವೆಯನ್ನು ಪರೋಕ್ಷವಾಗಿ ಮಾಡುತ್ತಿರುವ ಒಬ್ಬ ಸಾಹಿತಿಯೆ ಆಗಿದ್ದಾರೆ ಸಾವಿತ್ರಮ್ಮನವರು. ಪತಿಯಿಂದ ಒಂದೊಂದು ಕನ್ನಡದ ಕೃತಿ ರಚಿತವಾದಾಗಲೂ ಶ್ರೀಮತಿಯವರಿಗೆ ಅಪರೂಪಕ್ಕೆ ಹುಟ್ಟಿದ ಮಗುವಿನ ಜನನದಷ್ಟೇ ಸಂತಸ. ಎಂ.ಎಸ್.ಸಿ. ಓದುತ್ತಿರುವ ಮಗ, ಕನ್ನಡ ಎಂ.ಎ. ಓದುತ್ತಿರುವ ಒಬ್ಬ ಮಗಳು ಇವರಿಂದ ಕೂಡಿರುವ ದೇ.ಜ.ಗೌ. ಅವರ ಸಂಸಾರ ಸಾಹಿತ್ಯದ ನೆಲೆಮನೆಯಾಗಿದೆ. ಇವರ ಮನೆ ಕನ್ನಡ ಜನತೆಗೆ ಒಂದು ಆದರ್ಶ ಕುಟುಂಬವಾಗಿದೆ.

ದೇ.ಜ.ಗೌ. ದಂಪತಿಗಳು ಮಣ್ಣಿನ ಮಕ್ಕಳು. ಅವರು ಹುಟ್ಟು ಕನ್ನಡಿಗರು. ಬೆಳೆದಿದ್ದು ಕನ್ನಡಿಗರಾಗಿ, ಬಾಳುತ್ತಿರುವುದು ಕನ್ನಡಿಗರಾಗಿ ಮತ್ತು ಕನ್ನಡಕ್ಕಾಗಿ. ಅವರ ಮನೆಯ ವಾತಾವರಣದಲ್ಲಿ ಸುಳಿಯುವ ಗಾಳಿಯೂ ಕನ್ನಡದ ಸೊಗಡನ್ನೇ ಸೂಸುತ್ತದೆ. ಕನ್ನಡದ ಕಂಪು ಮನೆತನದಲ್ಲಿ ಕಡಿಮೆಯಾಗದಂತೆ ಕಾಪಾಡಲು ಪ್ರಾಧ್ಯಾಪಕರ ಕೈಹಿಡಿದ ಸಾವಿತ್ರಮ್ಮನವರೂ ಕಾರಣರಾಗಿದ್ದಾರೆ. ಸಾವಿತ್ರಮ್ಮನವರು ಕನ್ನಡದ ಕುವರಿ, ಆ ಕುವರಿಯನ್ನು ಕೈ ಹಿಡಿದ ದೇ.ಜವರೇಗೌಡರು ಕನ್ನಡಮ್ಮನ ಭಕ್ತರಾಗುವುದರಲ್ಲಿ ಆಶ್ಚರ್ಯವೇನಿದೆ?

ಕೃಪೆ: ಆಮುಖ

## ಅಗಲಿಕೆ

### ಶ್ರೀಮತಿ ಇಂದಿರಾ

ನಮ್ಮ ಹಿರಿಯ ಸದಸ್ಯರಾದ ಶ್ರೀ. ಬಿ. ಆರ್. ಶಂಕರ್ ಅವರ ಪತ್ನಿ ಶ್ರೀಮತಿ ಇಂದಿರಾ ಶಂಕರ್ ಅವರು ಕಳೆದ ತಿಂಗಳು ಬೆಂಗಳೂರಿನಲ್ಲಿ ನಿಧನರಾದರು. ಶ್ರೀಮತಿ ಇಂದಿರಾ ಶ್ರೀ. ಶಂಕರ್ ಅವರು ಬಹಳ ಕಾಲ ಮುಂಬಯಿಯಲ್ಲಿ ವಾಸವಾಗಿದ್ದು, ತಮ್ಮ ನಿವೃತ್ತ ಜೀವನವನ್ನು ಬೆಂಗಳೂರಿನಲ್ಲಿ ಕಳೆಯುತ್ತಿದ್ದರು. ಮುಂಬಯಿಯಲ್ಲಿದ್ದಾಗ ಮೈಸೂರು ಅಸೋಸಿಯೇಶನ್ ಕಾರ್ಯಕ್ರಮಗಳಲ್ಲಿ ಬಹಳ ಸಕ್ರಿಯವಾಗಿರುತ್ತಿದ್ದರು.

ಶ್ರೀಮತಿ ಇಂದಿರಾ ಅವರು ತಮ್ಮ ಪತಿ ಶಂಕರ್, ಇಬ್ಬರು ಗಂಡು ಮಕ್ಕಳು ಸೊಸೆಯಂದಿರು, ಮೊಮ್ಮಕ್ಕಳನ್ನು ಅಗಲಿರುತ್ತಾರೆ.

ಅವರ ಆತ್ಮಕ್ಕೆ ಸದ್ಗತಿ ದೊರಕಲೆಂದೂ, ಆತ್ಮೀಯರಿಗೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ದಯಪಾಲಿಸಲೆಂದೂ ಪ್ರಾರ್ಥಿಸುತ್ತೇವೆ.

### ಶ್ರೀಮತಿ ರೇವತಿ ಕೆ. ಶೆಟ್ಟಿ

ನಮ್ಮ ಸದಸ್ಯರಾದ ಶ್ರೀ ಸಿದ್ಧಕಟ್ಟೆ ಪಧ್ಮನಾಭ ಅವರ ತಾಯಿ ಶ್ರೀಮತಿ ರೇವತಿ ಕೆ. ಶೆಟ್ಟಿ ಅವರು ಕಳೆದ ತಿಂಗಳು ಸಿದ್ಧಕಟ್ಟೆಯ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿರುತ್ತಾರೆ. ಅವರಿಗೆ ನೇಸರು ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

# ಡಾ| ಹಾಲತಿ ಸೋಮಶೇಖರ್ ಅವರ ವಿನೂತನ ಶೈಲಿಯ ಕೃತಿ ಲಂಕೇಶ್ ಹೇಗಿದ್ದರು!?

ಲಂಕೇಶ್ ಹೇಗಿದ್ದರು? ವಿಸ್ಮಯ ಪ್ರಕಾಶನ ಮೈಸೂರು ಇವರ 201 ನೆಯ ಕೊಡುಗೆಯಾಗಿ ಮಾಡಿ ಬಂದಿರುವ ವಿನೂತನ ಶೈಲಿಯ ಕೃತಿಯಾಗಿದೆ. ಮುಗುಳ್ನಗುತ್ತಿರುವ ಲಂಕೇಶರ ಮುಖಚಿತ್ರವಿರುವ ಈ ಕೃತಿಯಲ್ಲಿ ಕೃತಿಕಾರರು ಲಂಕೇಶನ ಒಡನಾಟದಲ್ಲಿದ್ದ ಅವರ ಸಾಹಿತಿಮಿತ್ರರ ಜೊತೆ ಅವರ ಹತ್ತಿರದ ಸಂಬಂಧಗಳನ್ನು ಇಲ್ಲಿ ಪುಟ ಪುಟಗಳಲ್ಲಿ ತೆರೆದಿಟ್ಟಿದ್ದಾರೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇದೊಂದು ಹೊಸ ರೀತಿಯ ಕೃತಿಯೆನ್ನಬಹುದು. ಲಂಕೇಶ್ ಮತ್ತು ಅವರ ಒಡನಾಟದಲ್ಲಿದ್ದವರ ವಿಚಾರ, ಅನಿಸಿಕೆ, ಇದರಿಂದ ತೆರೆದುಕೊಂಡಿರುವ ಅವರ ಬದುಕು ನಮ್ಮನ್ನೊಂದು ಮಾಯಾಲೋಕಕ್ಕೆ ಕರೆದುಕೊಂಡು ಹೋಗುತ್ತದೆ. ವಿಶಿಷ್ಟ ರೀತಿಯ ಬದುಕನ್ನು ಬಾಳಿ ಬದುಕಿದ ಲಂಕೇಶರ ಬದುಕನ್ನು ಇದ್ದಕ್ಕಿದ್ದಂತೆಯೆ ತೆರೆದಿಟ್ಟ ಲೇಖಕರ ಜಾಣ್ಮೆಗೆ ನೀವು ತಲೆದೂಗಲೇ ಬೇಕಾಗುತ್ತದೆ.

ಲಂಕೇಶರನ್ನು ಕುರಿತು ಚರ್ಚೆ ನಡೆಸುವಾಗ ಅವರ ಪ್ರತಿಭೆ ಅದು ಒಳಗೊಳ್ಳದ ವಿಷಯಗಳ ಬಗ್ಗೆ ಹೆಚ್ಚು ಪ್ರಮಾಣದಲ್ಲಿ ಚರ್ಚೆ ನಡೆದಿರುವುದು ವಿಷಾದನೀಯ. ಲಂಕೇಶರ ಸಾಹಿತ್ಯ ತೆರೆದಿಡುವ ಜಗತ್ತು ಬುದ್ಧಿಯ ಮೂಲಕವೆಮಾಡಿದ್ದರೂ, ಅದು ಅವರ ಅಂತರಾತ್ಮದ ಧ್ವನಿಯೂ ಆಗಿತ್ತು. ಕಂಡದ್ದನ್ನು ಕಂಡ ಹಾಗೆ ಹೇಳುವ ಅವರ ಧೈರ್ಯವೇ ಅವರನ್ನು ಕಲಾವಿದರನ್ನಾಗಿ ರೂಪಿಸಿದ ಶಕ್ತಿಯಾಗಿದೆಯೆನ್ನಬಹುದಾಗಿದೆ.

ಲಂಕೇಶ್ ಆಧುನಿಕ ಕನ್ನಡದ ಅಸಾಮಾನ್ಯ ಪ್ರತಿಭೆಗಳಲೊಬ್ಬರು ಎನ್ನುವುದನ್ನು ಕನ್ನಡ ಸಾಹಿತ್ಯವನ್ನು ತಿಳಿದವರು ಯಾರೂ ನಿರಾಕರಿಸಲಾರರು. ಆದರೆ ಆ ಪ್ರತಿಭೆಯೊಂದಿಗೆ ಅವರಲ್ಲಿ ಮನೆ ಮಾಡಿದ್ದ ಅಸಹನೆ, ಭೀತಿ, ಅಸೂಯೆ ಅವರ ಪ್ರತಿಭೆಯ ಸುತ್ತ ಬೇಲಿ ಹಾಕಿದ್ದವು.

ಲಂಕೇಶ್ ಓರ್ವ ಅರ್ಹ ಸಂಪಾದಕ ಅಲ್ಲದೆ ಅನ್ವೇಷಕ ಕೂಡಾ ಅವರ ಕಣ್ಣಿಗೆ ಬಿದ್ದದ್ದನ್ನು ಅವರೆಂದೂ ಮರೆಮಾಚಿದ್ದಿಲ್ಲ. ಆದರೆ ಅವರಲ್ಲಿ ಅಂತರ್ಗತವಾಗಿದ್ದ ಶಕ್ತಿಗಳಿಗೆ ಅವರ ಒಂದು ಮಿತಿಯನ್ನು ಹಾಕಿಕೊಂಡಿದ್ದರೆನ್ನಬಹುದು. ಲಂಕೇಶರು ತಮ್ಮ ನ್ಯೂನ್ಯತೆಗಳನ್ನೆಂದೂ ಮರೆಮಾಚುತ್ತಿರಲಿಲ್ಲ. ಅವರ ವ್ಯಕ್ತಿತ್ವ ತುಂಬಾ ಅಸಂಕೀರ್ಣವಾಗಿದ್ದಂತೆ ವೈರುಧ್ಯಗಳಿಂದ ಕೂಡಾ ಕೂಡಿತ್ತು. ಅವರೋರ್ವ ಮೂಡಿ ವ್ಯಕ್ತಿಯಾಗಿದ್ದ ಕಾರಣ ಅವರನ್ನು ಪ್ರೀತಿಸುವ, ದ್ವೇಷಿಸುವ, ಅಪಮಾನಿಸುವ, ನಂಬುವ, ಮೆಚ್ಚುವ ಎಲ್ಲ ರೀತಿಯ ಜನರೂ ಅವರ ಸುತ್ತ ಮುತ್ತ ಇದ್ದರು. ಅವರು ಜೀವನ ಪ್ರೇಮಿಯಾಗಿದ್ದರು. ಕೀರ್ತಿ ಸ್ಥಾನದ ಬೆನ್ನು ಹತ್ತದ ಇವರು ಅವುಗಳಿಗಾಗಿ ಸರಕಾರವನ್ನು ಮೆಚ್ಚಿಸುವ ಕಾರ್ಯಕ್ಕೆ ಕೈ ಹಾಕದ ವಿಶಿಷ್ಟರಾಗಿಯೇ ಉಳಿದರು. ಲಂಕೇಶರನ್ನು ಕೆಲವು ವಿಷಯಕ್ಕಾಗಿ ಮೆಚ್ಚುವವರು. ಕೆಲವು ವಿಶಯಕ್ಕಾಗಿ ಅವರನ್ನು ಅಷ್ಟೇ ದ್ವೇಷಿಸುತ್ತಿದ್ದರು ಕೂಡಾ.

ಲಂಕೇಶ್ ಪತ್ರಿಕೆ ಲಂಕೇಶರ ಬದುಕನ್ನು ನಮ್ಮ ಮುಂದೆ ಇದ್ದಕ್ಕಿದ್ದಂತೆಯೆ ತೆರೆದಿಟ್ಟಿದ್ದಾರೆ. ಲಂಕೇಶ್ ಅವರ ಬದುಕು ತುಂಬಾ ಸಂಕೀರ್ಣವಾದುದು. ಕುಡಿತ, ಕುದುರೆ, ಜೂಜು, ಇಸ್ಪೀಟು, ಹೆಣ್ಣು ಎಲ್ಲದರ ಬಗ್ಗೆ ಅವರಿಗೆ ಆಸಕ್ತಿ ಇತ್ತು. ಕೆಲವೊಮ್ಮೆ ಅದು ಎಲ್ಲೆ ಕೂಡಾ ಮೀರುತ್ತಿತ್ತು. ಅವರ ಈ ಎಲ್ಲ ವೈರುಧ್ಯಗಳ ಹಿಂದೆ ಕೂಡಾ ಓರ್ವ ಸೃಜನಶೀಲ ಲಂಕೇಶ್ ಓರ್ವ ಲವಲವಿಕೆಯ ವ್ಯಕ್ತಿ ಬದುಕುತ್ತಿದ್ದನೆನ್ನುವುದನ್ನು ಇಲ್ಲಿ ಲೇಖಕ ಬೇರೆ ಬೇರೆ ಲೇಖಕರು ಲಂಕೇಶ್‌ರನ್ನು ಕಂಡಂತೆ ಅಕ್ಷರ ರೂಪದಲ್ಲಿ ಆಪ್ತವಾಗುವ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಇಲ್ಲಿ ಲಂಕೇಶ್ ಅವರ ಪತ್ನಿ ಇಂದಿರಾ ಅಲ್ಲದೆ ತೀರಾ ಹತ್ತಿರದ ಮಿತ್ರ (ಗಿರೀಶ್ ಕಾರ್ನಾಡ್) ಅವರ ಅನಿಸಿಕೆಗಳು ಇಲ್ಲಿ ದಾಖಲಾಗಿವೆ.

ಲಂಕೇಶರದು ಒಂದು ಅರ್ಥ ಮಾಡಿಕೊಳ್ಳಲಾಗದ ವಿಶಿಷ್ಟ ವ್ಯಕ್ತಿತ್ವ. ಅವರು ಹೀಗೆ ಅಂತ ಒಂದು ನಿರ್ದಿಷ್ಟ ಅಭಿಪ್ರಾಯವನ್ನು ಹೊಂದುವುದು ಸಾಧ್ಯವಾಗುವಂತಿರಲಿಲ್ಲ. ಅವರನ್ನು ಅರ್ಥಮಾಡಿಕೊಳ್ಳುವುದು ತುಂಬಾ ಕಷ್ಟದ ಕೆಲಸ. ಆದರೆ ಹಾಲತಿ ಸೋಮಶೇಖರ್ ಇಲ್ಲಿ ಲಂಕೇಶರನ್ನು ಹತ್ತಿರದಿಂದ ಬಲ್ಲವರ ಅನುಭವಗಳ ಮೂಲಕ, ಆವರವರ ದೃಷ್ಟಿಕೋನಗಳ ಮೂಲಕ ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಓರ್ವ ವ್ಯಕ್ತಿಯನ್ನು ಬೇರೆ ಬೇರೆ ವ್ಯಕ್ತಿಗಳು ಹೇಗೆ ವಿಭಿನ್ನ ನೆಲೆಯಲ್ಲಿ ಕಂಡುಕೊಳ್ಳುತ್ತಾರೆ ಎನ್ನುವುದಕ್ಕೆ ಈ ಕೃತಿ ಸಾಕ್ಷಿ ಹೇಳುತ್ತದೆ. ಈ ವಿಶಿಷ್ಟ ಕೃತಿ ಲಂಕೇಶರ ಬದುಕನ್ನೂ ಅವರ ಗುಣ ಅವಗುಣಗಳನ್ನು ಸಮಚಿತ್ತತೆಯಿಂದ ನೋಡಿದ್ದನ್ನು ನಾವಿಲ್ಲಿ ಕಾಣುತ್ತೇವೆ. ಅವರ ಸಾಧನೆ ಮತ್ತು ವ್ಯಕ್ತಿ ದೌರ್ಬಲ್ಯವನ್ನು ಪಾರದರ್ಶಕವಾಗಿ ಇಲ್ಲಿ ಚಿತ್ರಿಸಲಾಗಿದೆ. ಈ ಕೃತಿ ಇಂತಹ ರೀತಿಯ ಕೃತಿ ಬರೆಯಬಯಸುವವರಿಗೆ ಮುಂಬರುವ ದಿನಗಳಲ್ಲಿ ಖಂಡಿತವಾಗಿಯೂ ಮಾರ್ಗದರ್ಶಿಯ, ದಾರಿದೀಪದ ಕೆಲಸವನ್ನು ಮಾಡಬಹುದಾಗಿದೆ.

ಲಂಕೇಶ್ ಅವರ ತನ್ನನ್ನು ತಾನು ಕಂಡುಕೊಂಡಂತೆ ಅವರ ನಾನೊಲ್ಲದ ನನ್ನ ಗುಣ ಲೇಖನದಲ್ಲಿ ಹೀಗೆ ಬರೆಯುತ್ತಾರೆ.

ನಾನು ಯಾರು?.... ಹೆಂಡತಿಯ ಪ್ರಕಾರ ನಾನು ಲೋಕ ಜ್ಞಾನವಿಲ್ಲದವನು. ಗೆಳೆಯರ ಪ್ರಕಾರ ಸಲ್ಲದನ್ನಲ್ಲ ಕಟ್ಟಿಕೊಂಡು ಒದ್ದಾಡುವವನು. ಪಂಡಿತರ ಪ್ರಕಾರ ಪಾಂಡಿತ್ಯದ ಮಂತ್ರಶಕ್ತಿ ಅರಿಯದವನು, ವಿಜ್ಞಾನಿಗಳ ಪ್ರಕಾರ ಪರಂಪರೆಯ ಮೂಲಾರಾಧಕ, ರಾಜಕಾರಿಣಿಗಳ ಪ್ರಕಾರ ಕನಸುಗಾರ, ಕನಸುಗಾರರ ಪ್ರಕಾರ ಐಹಿಕಗಳಿಗೆ ಗಂಟುಬದ್ಧವನು, ಸನ್ಯಾಸಿಗಳ ಪ್ರಕಾರ ಜಗತ್ತಿನ ಅಲ್ಲೋಲ ಕಲ್ಲೋಲದಲ್ಲಿ ನುಚ್ಚು ನೂರಾದವನು – ಈ ಎಲ್ಲ ಗುಣ ಅವಗುಣಗಳೂ ನಾನು ಎಷ್ಟೇ ತಿರಸ್ಕರಿಸಿದರೂ ನನ್ನಲ್ಲಿವೆ.

✍ ಕರುಣಾಕರ್ ಎನ್. ಶೆಟ್ಟಿ, ಪಣಿಯೂರ್

ಜಿ.ಪಿ.ಬಸವರಾಜು ಅವರ ಅನಿಸಿಕೆಯತ್ತ ಗಮನ ಹರಿಸಿದಾಗ ಲಂಕೇಶ್ ಎಂಥವರು ಎಂದು ತಿಳಿದುಬರುತ್ತದೆ. ಮುಟ್ಟಿದರೆ ಮುನಿಯುವ ಸ್ಫೋಟಿಸುವ, ಹರಿಹಾಯುವ ರೇಗುವ ತನ್ನ ಬಗೆಗೇ ಬೀಗುವ ಕನ್ನಡದ ವಿವಾದಾತ್ಮಕ ವಿಶಿಷ್ಟ ಪ್ರತಿಭೆಯ ಲೇಖಕ ಪಿ.ಲಂಕೇಶ್, ದೈತ್ಯ ಎನ್ನುವ ಪದದ ಒಳ್ಳೆಯ ಮತ್ತು ಕೆಟ್ಟ ಎರಡೂ ಅರ್ಥಗಳನ್ನು ಹಚ್ಚಬಹುದಾದ ಲೇಖಕರೂ ಇವರೇ. . . . ಉರಿಯುವ, ಸಿಡಿಯುವ, ಕಿಡಿಕಾರುವ ಮತ್ತು ಈ ಮೂಲಕವೇ ಬದುಕುವ ಲಂಕೇಶ್ ಯಾವಾಗಲೂ ಕ್ಷುದ್ರ ಯುವಕನೇ'

ಸುಮತೀಂದ್ರ ನಾಡಿಗರು ಹೇಳುವಂತೆ ತಾನು ಬೈಯುತ್ತಿರಬೇಕು, ಉಳಿದವರು ಬೈಸಿಕೊಳ್ಳುತ್ತಿರಬೇಕು ಎನ್ನುವ ಸೂತ್ರವನ್ನು ಕಡೆಯವರೆಗೂ ಲಂಕೇಶ್ ಪಾಲಿಸಿಕೊಂಡು ಹೋಗಿದ್ದಾರೆ.

ಇಂತಹ ಅನುಭವ, ನೇರ ಅಭಿಪ್ರಾಯಗಳಿಂದ ಇಲ್ಲಿ ನಾವು ಲಂಕೇಶರ ಬದುಕನ್ನು ಬಗೆಯಬಹುದು. ಕೃತಿಯನ್ನು ಓದುತ್ತಾ ಹೋದಂತೆ ಪಿ. ಲಂಕೇಶರ ಇಡಿಯಾಗಿ ನಮ್ಮೆದುರು ಪ್ರತ್ಯಕ್ಷವಾಗುತ್ತದೆ. ಲೇಖಕರಿಗೂ ಪ್ರಕಟಿಸಿರುವ ವಿಸ್ಮಯ ಪ್ರಕಾಶನ ಇವರಿಗೂ ಇಲ್ಲಿ ಹಾರ್ದಿಕ ಅಭಿನಂದನೆಗಳು ಸಲ್ಲುತ್ತೇವೆ.

■

# ತುಳು-ಕನ್ನಡಿಗರ ಹೆಮ್ಮೆಯ ಧೀಮಂತ ಕವಿ ಕೈಯ್ಯಾರ

ದುಡಿತವೇ ನನ್ನ ದೇವರು, ಲೋಕ ದೇವಕುಲ
ಬೆವರೆ ಹೂ ಹಣ್ಣು ಕಾಯ್, ಕಣ್ಣೀರ ತೀರ್ಥಂ
ಎಮ್ಮೊಂದಿಗರ ಬಾಳ ಸಾವು ನೋವಿನ ಗೋಳ
ಉಂದಿಹೆನು ಸಮಪಾಲ-ನನಗದುವೆ ಮೋಕ್ಷಂ

ದುಡಿತಕ್ಕೇ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ ಕಾಯಕವೇ ಕೈಲಾಸಂ ಎಂಬ ಬಸವಣ್ಣನವರ ಸತ್ಪಥದಲ್ಲಿ ಸಾಗಿ ಅದರಂತೆ ಬಾಳಿದವರು ಹಿರಿಯ ಧೀಮಂತ ಚೇತನ, ಕನ್ನಡಾಂಬೆಯ ಪುತ್ರರತ್ನ ಹಿರಿಯ ಚೇತನ ಕೈಯ್ಯಾರ ಕಿಞ್ಞಣ್ಣ ರೈ. ಕಾಸರಗೋಡಿನ ಕನ್ನಡ ಪರ ಹೋರಾಟದಲ್ಲಿ ಕೇಳಿ ಬರುವ ಮೊದಲ ಹೆಸರು ಕಯ್ಯಾರ ಕಿಞ್ಞಣ್ಣ ರೈ ಅವರದ್ದು. ಕಾಸರಗೋಡು ಜಿಲ್ಲೆಯು ಕರ್ನಾಟಕದ ಭಾಗವಾಗಿದ್ದ ಕಾಲದಿಂದಲೂ ತಮ್ಮ ಸಾಹಿತ್ಯ, ಸಮಾಜ ಸೇವೆಯ ಮೂಲಕ ಗುರುತಿಸಿಕೊಂಡವರು. ಇವರಿಗೆ ತುಳು ಭಾಷೆ ಹೆತ್ತ ತಾಯಿಯಾದರೆ, ಕನ್ನಡ ಭಾಷೆ ಸಾಕುತಾಯಿ. ತಮ್ಮನ್ನು ಬೆಳೆಸಿದ ಕನ್ನಡ ತುಳು ಭಾಷೆಯ ಮೇಲೆ ಇವರಿಗೆ ಅಪಾರ ಒಲವು.



ಜುಲೈ8, 1915ರಂದು ದುಗ್ಗಪ್ಪ ರೈ ಮತ್ತು ದೇಯಕ್ಕ ರೈ ದಂಪತಿಗಳ ಪುತ್ರನಾಗಿ ಜನಿಸಿದ ಇವರಿಗೆ ಕೈಯ್ಯಾರ ಕಿಞ್ಞಣ್ಣ ರೈ ವಿಶಿಷ್ಟವಾದ ನಾಮಕರಣ ಮಾಡಲಾಯಿತು. ಇವರ ಹೆಸರು ವಿಶಿಷ್ಟವಾಗಿದ್ದು ಕನ್ನಡದಲ್ಲಿ ಬರೆಯುವಾಗ ಬಹಳ ಅಪರೂಪವಾಗಿ ಬಳಸುವ ಅನುನಾಸಿಕ' ಞ' ಪದವನ್ನೆ ಸೇರಿಸಿ ಬರೆಯುವುದು. ಇವರು ಕೇವಲ ತನ್ನ ಕಾರ್ಯಗಳಿಂದ ಮಾತ್ರವಲ್ಲ ಹೆಸರಿನಲ್ಲಿಯೂ ವಿಶೇಷತೆ ಪಡೆಯುತ್ತಾರೆ. ಕಿಞ್ಞಣ್ಣ ಎಂದರೆ ತುಳುವಿನಲ್ಲಿ ಕಿರಿಯವನು ಎಂದರ್ಥ.  ಅದರಂತೆ ಅವರ ಪತ್ನಿಯ ಹೆಸರೂ ಕೂಡಾ ವಿಶಿಷ್ಟ ಉಚ್ಚಾರ ದಿಂದ ಕೂಡಿದೆ. ಅವರ ಧರ್ಮಪತ್ನಿ ಉಞ್ಞಕ್ಕೆ. ಬದಿಯಡ್ಕ ಸಮೀಪದ ಪೆರಡಾಲ ಎಂಬ ಗ್ರಾಮದಲ್ಲಿರುವ ಕವಿತಾ ಕುಟೀರದಲ್ಲಿ ರೈ ಅವರ ವಾಸ. ಇವರೀಗ 99ರ ಯುವಕ.

ಕೃಷಿಕ ಮನೆತನದಲ್ಲಿ ಜನಿಸಿದ ಕೈಯ್ಯಾರ ಕಿಞ್ಞಣ್ಣ ರೈ ಅವರು ಒಬ್ಬ ಆದರ್ಶ ಶಿಕ್ಷಕರಾಗಿ, ಧೀಮಂತ ಪತ್ರಿಕೋದ್ಯಮಿಯಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಕವಿಯಾಗಿ, ಸಾಹಿತಿಯಾಗಿ ಹೆಸರುವಾಸಿಯಾದವರು.

'ಶ್ರೀಮುಖ' ಕವಿ ಕೈಯ್ಯಾರರ ಚೊಚ್ಚಲ ಕವನ ಸಂಕಲನ. ತ್ನ್ನ 12ನೇ ವಯಸ್ಸಿನಲ್ಲಿ 'ಸುಶೀಲಾ' ಎಂಬ ಹಸ್ತ ಪ್ರತಿಯನ್ನು ಪ್ರಕಟಿಸಿದ ಹೆಗ್ಗಳಿಕೆ ಇವರದ್ದು. " ಬೆಂಕಿ ಬಿದ್ದಿದೆ ಮನೆಗೆ ಓ ಬಾ ಬೇಗ ಬನ್ನಿ" ಎಂಬ ಕೈಯ್ಯಾರರ ಕವನ ಜನರ ನರನಾಡಿಗಳಲ್ಲಿ ಮಿಂಚು ಹರಿಸಿದ್ದು ಮರೆಯುವಂತಿಲ್ಲ. ಕರ್ನಾಟಕದ ಏಕೀಕರಣಕ್ಕೆ , ಕಾಸರಗೋಡು ಕನ್ನಡಿಗರನ್ನು ಮುಖವಾಹಿನಿಗೆ ಸೇರಿಸಲು ಮಾಡಿದ ಹೋರಾಟ ಅವರೊಬ್ಬ ಧೀಮಂತ ಕವಿ ಎನ್ನುವುದಕ್ಕೆ ನಿದರ್ಶನ. ಆದರೆ ಅವರ ಶ್ರಮಕ್ಕೆ ಫಲ ದೊರೆಯದೇ ಇದ್ದದ್ದು ಮಾತ್ರ ವಿಷಾದನೀಯ ಅಂಶ.

ಕೃಷಿಯಾಗಲಿ, ಹೋರಾಟವಾಗಲಿ,ಸಾಹಿತ್ಯ ಕೃಷಿಯಾಗಲಿ, ಯಾವ ಕ್ಷೇತ್ರದಲ್ಲಿಯೂ ದುಡಿದು ದಣಿವರಿಯದ ದೈತ್ಯ ಚೇತನ ಕೈಯ್ಯಾರರದ್ದು. ತಮ್ಮ ಜೀವನದಲ್ಲಿ ಶಿಸ್ತು, ಸೇವೆ, ಕರ್ತವ್ಯಕ್ಕೆ ಪ್ರಾಮುಖ್ಯತೆ ನೀಡಿದ ಅವರದ್ದು ಆದರ್ಶಪ್ರಾಯ ಜೀವನ.

ಕೈಯ್ಯಾರ ಕಿಞ್ಞಣ್ಣ ರೈ ಅವರು ಶಾಲಾ ಶಿಕ್ಷಕರಾಗಿ ತನ್ನ ವೃತ್ತಿ ಜೀವನವನ್ನು ಆರಂಭಿಸಿದರು. ಬಿ.ಎ ಹಾಗೂ ಎಂ.ಎ ಪದವಿಯನ್ನು ಉಚ್ಚ ಶ್ರೇಣಿಯಲ್ಲಿ ಗಳಿಸಿದ ಕಯ್ಯಾರರು ಅಧ್ಯಾಪಕ ತರಬೇತಿ ಪಡೆದು ಶಿಕ್ಷಕರಾದರು. ಪತ್ರಿಕೋದ್ಯಮಗಳಲ್ಲಿಯೂ ಸ್ವಾಭಿಮಾನ, ಮದ್ರಾಸ್ ಮೈಲ್,, ಹಿಂದೂ ಪತ್ರಿಕೆಗಳಲ್ಲಿ ತಮ್ಮ ಹರಿತವಾದ ಬರವಣಿಗೆಯ ಮೂಲಕ ಜನರ ಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದರು. 1969ರಲ್ಲಿ 'ಅತ್ತು ್ಯತ್ತಮ ಶಿಕ್ಷಕ' ಪ್ರಶಸ್ತಿ ದೊರೆಯಿತು. ವ್ಯಾಕರಣ ಮತ್ತು ಮಕ್ಕಳ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರ. ಶ್ರೀಮುಖ, ಐಕ್ಯಗಾನ, ಪುನರ್‌ನವ, ಚೇತನ, ಕೊರಗ ಮತ್ತು ಇತರ ಕವನಗಳು, ಗಂಧವತೀ, ಶತಮಾನದ ಗಾನ, ಪ್ರತಿಭಾ ಪಯಸ್ವಿನೀ, ಎನ್ನಪ್ಪೆ ತುಳುವಪ್ಪೆನ್(ತುಳು ಕವನ ಸಂಕಲನ), ಮಕ್ಕಳ ಪದ್ಯ ಮಂಜರಿ (2 ಸಂಪುಟ), ಪಂಚಮೀ (ಉಪನಿಷತ್ತುಗಳ ಅನುವಾದ), ಆಶಾನರ ಖಂಡ ಕಾವ್ಯಗಳು ಮೊದಲಾದ ಕೃತಿಗಳಲ್ಲಿ ಕೈಯ್ಯಾರರ ಪ್ರತಿಭೆ ಮೆರೆದಿದೆ.

ಸ್ವಾತಂತ್ರ್ಯ ಹೋರಾಟಗಾರರಾಗಿ, ಕನ್ನಡದ ದೊಡ್ಡ ಸಾಹಿತಿಗಳಾಗಿ, ಆದರ್ಶ ಶಿಕ್ಷಕರಾಗಿ ಸಮಾಜ ಸುಧಾರಕರಾಗಿ, ಮಾನವೀಯತೆಯ ಹರಿಕಾರರಾಗಿ, ದೀರ್ಘವಾದ ಬದುಕಿನಲ್ಲಿ ಹೋರಾಟಗಾರರಾಗಿಯೂ ಮುನ್ನಡೆದವರು

✍ ಡಾ. ಪೂರ್ಣಿಮಾ ಎಸ್. ಶೆಟ್ಟಿ

ಕೈಯ್ಯಾರ ಅವರು. ಅವರ ಬದುಕೊಂದು ಅನುಭವದ ಗಣಿ; ತೆರೆದಿಟ್ಟ ಬುತ್ತಿ.ಕೇರಳದಲ್ಲಿದ್ದುಕೊಂಡೇ ಕನ್ನಡವನ್ನು ಉಸಿರಾಡುತ್ತಿರುವ ಕನ್ನಡ ಕಣ್ವರು ಕೈಯ್ಯಾರ ಕಿಞ್ಞಣ್ಣ ರೈ ಅವರು. ಸಾಂ ಸ್ಕೃತಿಕ ರಂಗದಲ್ಲಿ ಕೈಯ್ಯಾರ ಅವರದು ದೊಡ್ಡ ಹೆಸರು. ಕನ್ನಡದ ಜೀವವಾಗಿ ಉಸಿರಾಗಿ ಇಂದು ಗಡಿನಾಡಿನಲ್ಲಿ ಪ್ರವಹಿಸುತ್ತಿರುವ ದೊಡ್ಡ ಚೇತನ ರೈ ಅವರದ್ದು. ನಿಜದ ನೇರಕೆ ನಡೆಯುವ ನಿಶ್ಚಲತೆ, ಹಿಡಿದಿದ್ದನ್ನು ಕೊನೆಯತ್ನಕ ಸಾಧಿಸುವ ಸಂಕಲ್ಪ ಇವರ ನೈಜ ಹಿರಿಯ ಗುಣ. 'ಬದುಕಬೇಕೆನ್ನುವ ಬಯಕೆಯೊಂದಿಲ್ಲದಿರೆ ಬಾಳ್ಗೆ ಪೌರುಷವಿಲ್ಲ, ಪಂಥವಿಲ್ಲ ಎಂಬ ನಂಬಿ ನಡೆದವರು ಕೈಯ್ಯಾರ ಕಿಞಣ್ಣ ರೈ. ಇವರು ಭೂಷಣಪ್ರಾಯರಾಗಿರುವ ಪ್ರತಿಭಾವಂತ ಧೀಮಂತ ಕವಿ ಎಂದರೆ ಅತಿಶಯೋಕ್ತಿಯಾಗಲಾರದು. ನಾವು ಮನಸ್ಸಿನ ಬಾಗಿಲನ್ನು ಎತ್ತರಿಸಿಕೊಂಡರೆ ರೈ ಅವರ ಗುಣವನ್ನು ಕಾಣಲಿಕ್ಕೆ ಸಾಧ್ಯವಾಗಬಹುದು. ಅವರಲ್ಲಿ ಪ್ರಧಾನವಾದ ಎರಡು ಎಳೆಗಳನ್ನು ನಾವು ಗುರುತಿಸಬಹುದು, ಒಂದು ಅದ್ಭುತವಾದ, ಅದಮ್ಯವಾದ ಚೈತನ್ಯದಿಂದ ಕೂಡಿರತಕ್ಕ, ತೆಲುವ ಗಾಳಿಯಲ್ಲಿ ಚಿಂತನೆಗಳನ್ನು ಬಿತ್ತರಿಸತಕ್ಕ ಸ್ಫೂರ್ತಿದಾಯಕವಾದ, ನಿಸರ್ಗಜನ್ಯವಾದ ಕಾವ್ಯ ಪ್ರತಿಭೆಯ ಅಂಶ; ಇನ್ನೊಂದು ಅದ್ಭುತವಾದ ಗುಣ ಅವರ ಅಧ್ಯಾಪಕತ್ವದ ಹಿರಿಮೆ.

ಕೈಯ್ಯಾರ ಕಿಞ್ಞಣ್ಣ ರೈ ಅವರು ತಮ್ಮ ಕವನಗಳ ಮೂಲಕ ಸ್ವಾತಂತ್ರ್ಯದ ಕಹಳೆಯನ್ನು ಮೊಳಗಿಸಿದ ಧೀರ ಕವಿ. 'ಶೋಷಣೆಗೆ ಕನಲಿ ಘೋಷಣೆ' ಗೈಯ್ಯುತ್ತಾ ಕ್ರಾಂತಿಗೆ ಕರೆಕೊಡುವ, ಜನರನ್ನು ಬಡಿದೆಬ್ಬಿಸುವ ಕವಿತೆಗಳನ್ನು ಕಟ್ಟಿದರು. ದೀನ ದಲಿತರ ಬಗ್ಗೆ ಅಪಾರ ಕಾಳಜಿ ವಹಿಸಿದ್ದು ಮಾತ್ರವಲ್ಲ

ಅಸ್ಪ್ರಶ್ಯತೆಯ ವಿರುದ್ಧ ಹೋರಾಡಿದರು. ಪ್ರಕೃತಿ, ದೇಶ, ಧರ್ಮ ಇಂತಹ ಉದಾತ್ತ ಹಾಗೂ ಮಾನವತಾವಾದದ ವಿಷಯಗಳನ್ನು ರೈಯವರ ಕವನಗಳಲ್ಲಿ ಕಾಣಬಹುದು. ಭಾವನೆಯ ತೀಕ್ಷ್ಣತೆ, ಕಲ್ಪನೆಯ ವೈಭವ, ಭಾಷೆಯ ಸಿರಿ ಕೈಯ್ಯಾರರಿಗೆ ದೈವದತ್ತವಾಗಿ ಒಲಿದಿತ್ತು ಎನ್ನಬಹುದು. ಆದ್ದರಿಂದಲೇ ಅವರ ಕಾವ್ಯಗಳಲ್ಲಿ ವಿಶಿಷ್ಟ ಶಕ್ತಿ ಇದೆ. ಹೃದಯವನ್ನು ಹೊಡೆದೆಬ್ಬಿಸುವ, ಆಲೋಚನೆಯನ್ನು ಪ್ರಚೋದಿಸುವ ಸತ್ವವಿದೆ.

ಕವಿಯಾಗುವ ಮುನ್ನ ತಾನೊಬ್ಬ ತಾನೊಬ್ಬ ಕೃಷಿಕ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಕವಿ ತನ್ನ ಕವನದಲ್ಲಿ ಅದನ್ನು ಬಹಳ ಸುಂದರವಾಗಿ ಪರಿಮೂಡಿಸಿದ್ದಾರೆ. "ತಾನು ಜನ್ಮತ: ಕೃಷಿಕ; 'ನೊಗ ನೇಗಿಲುಗಳನ್ನು ಮಂದಾರಮಾಲೆಯನೆ' ಹೊತ್ತು ತಿರುಗುವ ಸಂತೋಷವುಳ್ಳವನು.' ತಾಯ್ನೆಲದ ಕೆಸರ್ನೀರ್ ಮಂದಾಕಿನೀ ತೀರ್ಥ, ಹುಲ್ಲೆ ರೋಮಾಂಚನ, ಬದುಕೆಲ್ಲ ಬಂಗಾರಂ' ಎಂದು ಅವರು ಹೆಮ್ಮೆಯಿಂದ ಹಾಡಿಕೊಂಡಿರುವುದು ಪ್ರತಿಯೊಬ್ಬ ಕೃಷಿಕನೂ ಹೆಮ್ಮೆಯಿಂದ ಬೀಗುವಂತೆ ಮಾಡುತ್ತದೆ.

ಕೈಯ್ಯಾರರು ಕನ್ನಡ ಸಂಸ್ಕೃತ ವಿದ್ವಾಂಸರು. 'ಎನ್ನ ಹೃದಯದ ಸ್ಫೂರ್ತಿ ಎನ್ನ ಜನತೆಯ ಶಕ್ತಿ ಎನ್ನ ನಾಡಿನ ಕೀರ್ತಿ ಹೆಚ್ಚಿಸಲ್ಕೆ, ಲೇಖನಿಯೇ ಮುಖ್ಯ ಎಂದು ಭಾವಿಸಿದವರು ಅವರು. ನಾಡು ನುಡಿಗಳೇ ಅವರ ಕಾವ್ಯಕ್ಕೆ ಪ್ರೇರಣೆ. ದುಡಿತವೇ ನಮ್ಮ ದೇವರೆಂದು ನಂಬಿ, ಲೋಕ ದೇವಕುಲ, ಬೆವರೆ ಹೂ ಹಣ್ಣು ಕಾಯಿ, ಕಣ್ಣೀರೆ ತೀರ್ಥ ಎಂದು ಆ ತಿಳಿದು ನಿಟ್ಟಿನಲ್ಲಿ ನಡೆದರು.ನೈಜತೆಗೆ ಕನ್ನಡಿ ಹಿಡಿಯುವ ಅವರ ಕವನಗಳು ಓದುಗನಿಗೆ ಇಷ್ಟವಾಗುತ್ತವೆ, "ರೈ ಅವರನ್ನು ಅರಿಯದ ಕಾವ್ಯರಸಿಕರು ಯಾರಿದ್ದಾರೆ. ಆಧುನಿಕ ಕನ್ನಡ ರಸಪ್ರಪಂಚದಲ್ಲಿ ರಾಜಕೀಯ, ಪ್ರಾಂತೀಕರಣ, ಶಿಕ್ಷಣ, ರಾಷ್ಟೀಯತೆ, ವಾದ, ವಿವಾದ, ಜನಜಾಗೃತಿ ಈ ಷಡಂಗಗಳನ್ನು ಸಮನ್ವಯಿಸಿಕೊಂಡ ಸಾಹಿತ್ಯ ಸಾಧನೆ ಕವಿವರ್ಯ ರೈ ಅವರದು. ಕರಾವಳಿಯ ಆಧುನಿಕ ಮಹಾಕವಿಯೆನ್ನಬಹುದು ಕಯ್ಯಾರರನ್ನು" ಎಂದು ಗೌರೀಶ ಕಾಯ್ಕಿಣಿ ಅವರು ಅಭಿಪ್ರಾಯ ಪಟ್ಟಿರುವುದರಲ್ಲಿ ತಥ್ಯವಿದೆ. ಕೈಯ್ಯಾರರ ಕವಿತೆಗಳು ದಾರ್ಶನಿಕ, ಉದಾತ, ನಿತ್ಯನೂತನ. ಅನುಭವಾಮೃತದ ಸೋನೆ ಸೂಸುವ ಅವರ ಕವನಗಳು ಜನಮನ ಗೆದ್ದಿವೆ.

ಕೈಯ್ಯಾರರು ಕೇವಲ ಕವಿಯಲ್ಲ. ಕಾವ್ಯ, ಸಾಹಿತ್ಯ ವಿಮರ್ಶೆ, ವ್ಯಾಕರಣ, ಶಿಶುಸಾಹಿತ್ಯ, ನಾಟಕ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಯ್ಯಾಡಿಸಿದ್ದರೂ ಅವರನ್ನು ಜನರು ಗುರುತಿಸುವುದು ಕವಿ ಕಯ್ಯಾರ ಕಿಞ್ಞಣ್ಣ ರೈ ಎಂದೇ. ಇದಕ್ಕೆ ಮುಖ್ಯ ಕಾರಣ .ಅವರ ಕಾವ್ಯದ ಅಂತ:ಸತ್ವ, ಅವರ ಕಾವ್ಯಕ್ಕೆ ಅಂತಹ ಶಕ್ತಿ ಇದೆ. ಸೊಗಸು ಇದೆ. ಅತ್ಯಂತ ಸಮರ್ಥವಾದ ಧ್ವನಿ ಇದೆ. ಸಮರ್ಥರಾದ ಕವಿಗಳು ಕಾವ್ಯ ಶಕ್ತಿಗೆ ಬೇಕಾದ ಪರಿಕರಗಳನ್ನು ಒದಗಿಸಿಕೊಂಡೇ ಕಲ್ಪನಾಶಕ್ತಿಯನ್ನೇ ಧಾರೆ ಎರೆದು ಅಭಿವ್ಯಕ್ತ ಮಾಧ್ಯಮದಲ್ಲಿ ಅದನ್ನು ಕೆಟೆದು ನಿಲ್ಲಿಸಬಲ್ಲರು. ಅಂತಹ ಒಂದು ಶಕ್ತಿ, ಪ್ರತಿಮಾ ಶಕ್ತಿ ಕಲ್ಪನಾ ಶಕ್ತಿ ಎಲ್ಲವೂ ಕೈಯ್ಯಾರರಲ್ಲಿದೆ ಎಂದೇ ಬದುಕಿನ ನೂರೆಂಟು ಜಂಜಾಟಗಳಿಗೆ ಹೆದರದೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಸಮಾಜದೊಡನೆ ಪರಿಸರದೊಡನೆ ಭಾವನಾತ್ಮಕ ಸಂಬಂಧವನ್ನಿಟ್ಟುಕೊಂಡು ಕಾವ್ಯ ಸೃಷ್ಟಿಗೈವರೆಂದೇ ಕೈಯ್ಯಾರರು ಜನತೆಯ ಮೆಚ್ಚುಗೆಗೆ ಪಾತ್ರರಾಗುತ್ತಾರೆ ಎಂಬ ಪ್ರೇಮಾ ಭಟ್ ಅವರ ಮಾತು ನಿಜವೇ ಆಗಿದೆ.

ಕೈಯ್ಯಾರರು ಭಾಷಾಭಿಮಾನಿ. ತುಳು, ಕನ್ನಡ, ಸಂಸ್ಕೃತ, ಮಲೆಯಾಳ, ಆಂಗ್ಲ ಹೀಗೆ ಪಂಚ ಭಾಷೆಯನ್ನು ಅರಿತಿದ್ದ ಅವರು ಒಬ್ಬ ಉತ್ತಮ ಕವಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಇವರು ಉತ್ತಮ ವಾಗ್ಮಿಯೂ ಹೌದು. ಎಲ್ಲಿಯೂ ಕೃತಕತೆಯ ಸೋಂಕಿಲ್ಲದ ಅವರ ಮಾತುಗಳಿಗೆ ಮರುಳಾಗದವರಿಲ್ಲ ಎನ್ನುವುದೂ ಅಷ್ಟೇ ಸತ್ಯ. ಇವರು ಆದರ್ಶ ಶಿಕ್ಷಕರು. ರಾಷ್ಟ್ರ ಪ್ರಶಸ್ತಿ ಪಡೆದ ಅತ್ತ್ಯುತ್ತಮ ಶಿಕ್ಷಕ. ಕಾಲು ಶತಮಾನಕ್ಕೂ ಅವರ ಅಧ್ಯಾಪನ ಅನುಭವ ಬಹಳ ವಿಶಿಷ್ಟವಾದದ್ದು.ಅವರ ಅಧ್ಯಾಪನಾ ಶೈಲಿ ಇತರರಿಗೆ ಮಾದರಿ. ಕೈಯ್ಯಾರರ ಸಾಧನೆಯನ್ನು ಗುರುತಿಸಿ ಅವರನ್ನು ಅರಸಿ ಬಂದ ಪ್ರಶಸ್ತಿಗಳು ಹಲವಾರು ಅದರಲ್ಲಿ ಮುಖ್ಯವಾದವುಗಳು ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ(1969), ರಾಷ್ಟ್ರ ಮಟ್ಟದ ಅತ್ತ್ಯುತ್ತಮ ಶಿಕ್ಷಕ (1969), ರಾಜ್ಯಮಟ್ಟದ ಅತ್ತ್ಯುತ್ತಮ ಶಿಕ್ಷಕ ನಾಡೋಜ ಪ್ರಶಸ್ತಿ, ಆದರ್ಶ ರತ್ನ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಕರ್ನಾಟಕ ಏಕೀಕರಣ ಪ್ರಶಸ್ತಿ, ಪ್ರಥಮ ಕರ್ನಾಟಕ ಗಡಿನಾಡ ರತ್ನ ಪ್ರಶಸ್ತಿ, ಕನ್ನಡ ಸಾಹಿತ್ಯ ಪ್ರಶಸ್ತಿ ಮೊದಲಾದವುಗಳು.

ಸಾಹಿತ್ಯದ ಸಫಲತೆ ಅದರ ಮಾರ್ಮಿಕತೆಯಲ್ಲಿದೆ; ಅನುಭಾವಿ ಕವಿಯ ಕವಿತೆ ಆನಂದದ ಹಿಗ್ಗಿನ ಸಗ್ಗದತ್ತ ಒಯ್ಯಬಲ್ಲ ಚೇತನವಾಗಿದೆ. ಸ್ವಯಂ ಚೈತನ್ಯದಿಂದ ಕೂಡಿದ ಕೈಯ್ಯಾರರು ಜಡ ವಸ್ತುಗಳಲ್ಲೂ ಚೇತನವನ್ನು ಹರಿಯಿಸಿ ನವಚೈತನ್ಯವನ್ನು ತುಂಬಬಲ್ಲವರು ಕೈಯ್ಯಾರ ಕಿಞ್ಞಣ್ಣ ರೈ ಅವರು. ಇಂತಹ ತುಳು-ಕನ್ನಡಿಗರ ಹೆಮ್ಮೆಯ, ಧೀಮಂತ ಕವಿ, ಸಾಹಿತಿ ಕೈಯ್ಯಾರ ಕಿಞ್ಞಣ್ಣ ರೈ ಅವರು ದಿನಾಂಕ 09.08.2015, ರವಿವಾರದಂದು ನಿಧನಹೊಂದಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ. ಗಡಿನಾಡ ಕಿಡಿಯೆಂದು ನಾಮಾಂಕಿತರಾದ ಕಯ್ಯಾರರ ನೆನಪನ್ನು ಮತ್ತೊಮ್ಮೆ ಮೆಲುಕು ಹಾಕಲಿಕ್ಕೋಸ್ಕರ ಈ ಲೇಖನ... ■

## ಚರ್ವಿತ ಚರ್ವಣ : ಸರಿ ತಪ್ಪು

ಸರಿಯೆನಿಸಿದ್ದನ್ನು ಮಾಡಿಬಿಡಿ
ತಪ್ಪೆನಿಸಿದ್ದನ್ನು ಮಾಡಬೇಡಿ
ಮಾಡಿದ್ದು ಸರಿಯೆನಿಸಿದರೆ ಮತ್ತೆ ಮತ್ತೆ ಮಾಡಿ
ತಪ್ಪೆನಿಸಿದರೆ ಮತ್ತೆ ಮಾಡ ಹೋಗಬೇಡಿ
ಸರಿಯೆನಿಸಿದ್ದೆಲ್ಲ ತಪ್ಪಲ್ಲವೆಂದಲ್ಲ
ತಪ್ಪಿನಲ್ಲೂ ಸರಿ ಇಲ್ಲವೆಂದಿಲ್ಲ
ತಪ್ಪನ್ನು ಸರಿಪಡಿಸಲಾಗದೆಂದೇನಿಲ್ಲ
ಸರಿಯನ್ನು ತಪ್ಪೆಂದು ಸಾಬೀತು ಪಡಿಸಲಾಗದೆಂದೇನಿಲ್ಲ
ನನಗೆ ಸರಿಯೆನಿಸಿದ್ದು, ಅವನಿಗೆ ತಪ್ಪೆನಿಸಬಹುದು
ನಿನ್ನೆ ತಪ್ಪೆನಿಸಿದ್ದು, ಇಂದು ಸರಿಯೆನಿಸಬಹುದು
ಆದರೂ,
ತಪ್ಪು ತಪ್ಪೇ, ಸರಿ ಸರಿಯೇ ಎನ್ನುವಂತೆಯೂ ಇಲ್ಲ
ಯಾಕೆಂದರೆ,
ತಪ್ಪಿಗೆ ತಾನೇ ಸರಿ, ಸರಿಯೇ ತಪ್ಪು
ಮತ್ತು,
ತಪ್ಪು ತಪ್ಪೊಪ್ಪಿಕ್ಕೊಳ್ಳದಿರುವಾಗ, ಸರಿಯೇಕೆ ತಪ್ಪೊಪ್ಪಿಕ್ಕೋಬೇಕು?
ಒಪ್ಪು – ತಪ್ಪುಗಳ ಬಗ್ಗೆ ತಲೆಕೆಡಿಸಿಕೊಳ್ಳೋದೇ ತಪ್ಪು
ತಪ್ಪು-ಒಪ್ಪುಗಳ ಗೋಜಿಗೆ ಹೋಗದಿರುವುದೇ ಸರಿ
ಆಗ,
ತಪ್ಪು ಸರಿಯೆನಿಸಿಕೊಂಡಿರುತ್ತೆ, ಸರಿ ಬಿಡಿ
ಸರಿ ಸರಿಯಾಗೇ ಉಳಿದಿರುತ್ತೆ, ತಪ್ಪು ತಿಳ್ಕೋಬೇಡಿ
ಸರಿಯೋ? ತಪ್ಪು?
ಕೇಳುತ್ತಿದೆ, ನನ್ನ...
ಚರ್ವಿತ ಚರ್ವಣ

– ಮನೋಹರ ನಾಯಕ್

# FORTHCOMING PROGRAMME

## KARNATIC MUSIC COMPETITION

### Competition – Rules & Regulations

There will be three age groups: (1) 8 yrs to 12 yrs.
(2) 13 yrs. to 17 yrs.
3) 18 yrs & above

Each participant must sing

**Group I:**

One Varna in Adi Taala (IInd Speed is must)

One Dasara Pada ( Purandara Dasa & other Kannada Haridasas)

Competition Date & Time: 23rd August 2015 at 10.00 a.m.

Duration: 10 Minutes

**Group II:**

One Atta Taala Varna

One Kruti of any Composers.

Competition Date & Time: 23rd August 2015 at 12.00 noon

Duration: 15 minutes

**Group III:**

Raga Nerval Swara

One Kruti of any Composers and one Dasara Padagalu (Purandaradasa , Kanakadasa, Vijayadasa, etc. in Kannada only)

**Duration: 15 Minutes**

Competition Date & Time: 23rd August 2015 at 3.00 p.m.

Prizes in each group:

| | | |
|---|---|---|
| 1st Prize | - | Rs. 2,000/- |
| 2nd Prize | - | Rs. 1,500/- |
| 3rd Prize | - | Rs. 1,000/- |
| 1 Consolation Prize | - | Rs. 500/- |

Judges decision is final. Judges can stop a participant at any time during the rendering. The prize-winners will have to perform during the Ganapati Festival at Mysore Association. If entries in any group are less than 5, there will be no competition in that group.

Entry Fee: Rs. 100/-

Entries have to be submitted at least 2 days before the competition day. No entries will be accepted on the same day.

### SUGAMA SANGEET COMPETITION

Competition – Rules & Regulations

**There will be four age groups:**

(1) 8 yrs to 12 yrs. (2) 13 yrs. to 17 yrs.
(3) 18 yrs to 39 yrs (4) 40 yrs & above

**There will be 3 Categories.**

(1) Kannada Bhavageethe (2) Kannada Dasarapadagalu
(3) Kannada Janapada Geethe

**Competition Date & Time: 30th August 2015 at 9.00 a.m.**

**Duration: 3 Minutes for each song.**

Prizes in each group:

| | | |
|---|---|---|
| 1st Prize | - | Rs. 1,000/- |
| 2nd Prize | - | Rs. 750/- |
| 3rd Prize | - | Rs. 500/- |
| 1 Consolation Prize | - | Rs. 250/- |

Judges decision is final. Judges can stop a participant at any time during the rendition. Prize winners may be called upon to give a programme at Mysore Association. If entries in any group are less than 5, there will be no competition in that group. If there are less than 10 participants, depending on the number of participants, number of prizes will vary.

Entry Fee: Rs. 50/- per category.

Entries have to be submitted at least on or before 20th August 2015. No entries will be accepted after this date.

---

## ನಾನೇಕೆ ಅಂಜಬೇಕು

ಅಗ್ನಿಸಂತಾನದ ಅರಮನೆಯಲ್ಲುಟ್ಟಿದ ನಾನು
ಒಡಲುರಿ ತಣಿಸದ ಕಡಲಿಗೇಕೆ ಅಂಜಬೇಕು
ಬಯಲು ಬೆದೆಗೆ ಬಸಿರಾಗಿ ಹಸಿರಾದ ನಾನು
ಹದಗೊಂಡು ಅರಳದ ಮನಸಿಗೇಕೆ ಅಳುಕಬೇಕು
ಚರಿತ್ರೆಯುದ್ದಕ್ಕೂ ಕತ್ತಲೆಯಂತೆ ನೆತ್ತರು ಚೆಲ್ಲಿದ ನಾನು
ನಾಯಿಕೊಡೆಯ ನೆರಳಿಗೇಕೆ ಬದುಕು ಬರಿದಾಗಿಸಿಕೊಳ್ಳಬೇಕು
ಹಂಚಿ ತಿನ್ನುವ ಅನ್ನದ ಬಳುವಳಿಯಾದ ನಾನು
ಸಂಚುಕೋರರ ಎಂಜಲೆಲೆಗೇಕೆ ಕಾಯಬೇಕು
ನೆಲಮುಗಿಲ ನಡುವೆ ಕಲ್ಲಾದ ನಾನು
ಬಿಸಿಲು ಝಳಕೇಕೆ ಭಯಪಡಬೇಕು
ಭೂಮಾತೆಯ ಸೆರಗಿನ ಹೂಗೊಂಡೆಯಾದ ನಾನು
ಶೃಂಗಾರದ ಕ್ಷಣಗಳಿಗೇಕೆ ಆಸೆ ಪಡಬೇಕು
ಮಳೆ ಗಾಳಿ ಚಳಿಯ ಗೆಳೆಯನಾದ ನಾನು
ಸೂರಿಗಾಗಿ ಸ್ವಾಭಿಮಾನವೇಕೆ ಮಾರಿಕೊಳ್ಳಬೇಕು
ಮಣ್ಣ ಧರ್ಮದ ಮನೆಯ ಕೂಸಾದ ನಾನು
ಜಾಣತನದ ಮಂತ್ರಗಳನೇಕೆ ಪಠಿಸಬೇಕು
ಸುಗ್ಗಿಗೆ ಬಂದವರಿಗೆ ಸಗ್ಗ ಕೊಟ್ಟ ನಾನು
ಈಗಲಾದರೂ ಮರಳಿ ಪಡೆದು ಮೆರೆಯಬೇಕು.

– ಡಾ. ಮರಿಯಪ್ಪ ನಾಟೇಕರ್

# BHARATA – Original name of our Country

In recent times, there has been considerable misconception as to the origins of the name of the Land – Bharatavarsha or Bharatakhanda. With the advent of the T.V. Serials, these misconceptions are being cloaked in authenticity, unfortunate as it seems.

There are four Bharatas in the Indian mythology, which includes Hindu and Jain streams. The first and ancient among them is Bharata, the eldest son of Rishabha Deva, first of the 24 Thirthankaras. The Second is Sarvadamana, son of Shakuntala and Dushyanta. The third is the brother of Rama. The Fourth being the Sage Bharata Muni, who is credited with the Natyashastra. We may rule out the last two, as they never 'ruled' all over India.

The popular acceptance is that Sarvadamana, Shakuntala's son ruled all over the Subcontinent and assumed the name (or title?) Bharata, and the land he ruled acquired the name Bharatavarsha. On the other hand, let us examine the story of Bharata, the son of King Rishabha Deva and Jayanti. (She is also called Yashaswati). Rishabhadeva is called Adinatha, the first to become a Jina (that is, one who wins over all desires), and has hundred sons. Because he is also called Puru, his lineage is known as Puru vamsha. The eldest of his sons is Bharata, and the youngest is Bahubali. Rishabhadeva divides his kingdom amongst his sons, major part being given to Bharata. Rishabhadeva thereafter becomes a recluse. Bharata rules from Ayodhya, is mighty, has a number of wives and is ambitious. Bahubali is equally brave, but is known for his incomparable beauty. In time, a chakra is born in his Ayudhagara (Ordnance Depot), which indicates that it is time for him to proceed on a conquest, which he does. The chakra proceeds over the 'Six Khandas' (continents) and Bharata in tow, conquers the entire planet, and acquires the title ¡°Chakri¡± (This is the origin of the title Chakravarty). The land he ruled and united thus, is given the name Ajanabha varsha or Bharata Khanda (which is an union of six khandas). However, at the fag end of his conquest, the charka stops outside Paudanapura, where Bahubali rules. Bahubali refuses to accept the sovereignty of his eldest brother, and challenges him. But both brothers unwilling to involve their soldiers in the horrific war, decide to fight as individuals only. And what glorious fights they engage in; Jalayuddha, Mallayuddha and Drishtiyuddha! The last involves locking of eyes. Bahubali wins over his brother in each one of them and proves that he is a better man. The great Chakravarty is defeated. But Bahubali in self-negation renounces the world and becomes a recluse. He does tapas for ages, standing on a mountain top. But he is unable to become a 'Jina' as his ego is still aglow and he is concerned that he is standing on Bharata's land. Finally his sister along with Bhararta approaches him and beseeches him to ¡°alight from his elephamt¡± (ego). Bahubali becomes aware of his ego and attains enlightenment. In time, King Bharata, father of Bharata vansha and known as 16th Manu, also gives up worldly pleasures and proceeds to Kailas as a recluse. This is the Bharata who ruled ¡°all over India¡±. Bharatesha Vaibhav describes his victories over the East Coast, South Coast, West coast and Central India. No such claims are made for Sarvadamana. Note that both hail from Puru vansha and Bharata is an ancestor of Sarvadamana! By all chronological events, Sarvadamana and Rama were contemporaries and both of them could not have ruled all over India. The story of Bharata and Bahubali is found in Vishnu purana and Bhagavata, apart from Jain Scriptures like Adipurana, Chavundaraya purana and Poorvapurana. But today

✍ **Dr. B.R.Manjunath**

Bharata is basically regarded as a Jain King only. The process of changing histories, credits or even the deities is not exclusive to other communities only. Hindus have contributed their share in good measure. Lord Venkatesha and Badarinarayana stand in mute testimony of our deeds.

Karnataka has a special role in this episode. Bahublai's enchanting monolithic stature adorns Shravana-belagola, as Gomateshwara. Gommata in Kannada mean, ¡°the most handsome one¡±. Asoka and his embracement of Buddhism are well publicized. What is not so well publicized, however, is Asoka's grandfather, the Great Chandra Gupta Maurya became a Jain towards the end of his rule, and along with his Guru Bhadrabahu and twelve thousand followers, chose Karnataka to stay as a recluse and attain 'sadgati' on the hills of Shravana Belagola! Many other great souls also opted for Karanataka - Adishankara, Ramanuja, Madhwa, amongst others. Karnataka in those times was being ruled by Jain Kings, who molded Karnataka's temperament into one of tolerance. With such a glorious tradition, history and literature of Jainism in Kannada, it is expected of at least Kannadigas to know of the real Bharata.

(Reprinted from the December Issue of 1988)

# ಆ ಕಣ್ಣೀರ ಬಿಂದು...

"ಏಯ್ ಕೋಮಲಾ, ಮನೆಗೆ ಬರುವ ಯೋಚನೆ–ಗೀಚನೆ ಇದೆಯೋ ಇಲ್ವೋ? ಹೊತ್ತು ಮುಳುಗುತ್ತಾ ಬಂದರೂ ನಿಮ್ಮದು ಹರಟೆ ಇನ್ನೂ ಮುಗಿಲಿಲ್ವೇ? ಎಂದು ಲೀಲಾ ಮಗಳನ್ನು ಕರೆದಳು. ಇನ್ನೂ ಎಷ್ಟೊಂದು ಕೆಲಸ ಬಾಕಿ ಇದೆ. ಮೊದಲು ಹಸು ಗಂಗೆಯ ಅಕ್ಕಚು ಬಿಸಿ ಮಾಡುತ್ತೇನೆ ಅಂದುಕೊಳ್ಳುತ್ತಿರುವಾಗಲೇ ಹೊರಗೆ ಹಿಮ ಹಿಮವಾಗಿದ್ದ ಕಟ್ಟಿಗೆಯನ್ನು ಒಣಗಲು ಹಾಕಿದ್ದು ನೆನಪಾಯಿತು. ಎಂದಿನಂತೆ ಲೀಲಾ ಆ ದಿನದ ಅವಳ ಬೀಡಿ ಕಟ್ಟುವ ಕೆಲಸವನ್ನು ಒಪ್ಪಿಸಿ ಬಂದರೂ, ಗೆಳತಿಗೆ ಸಿಕ್ಕಿ ಬರುತ್ತೇನೆ ಎಂದು ಹೇಳಿ ಹೋಗಿದ್ದ ಮಗಳು ಮನೆಗೆ ಬಾರದಿದ್ದನ್ನು ಕಂಡು ಹುಸಿ ಕೋಪದಿಂದ ಕೂಗಿ ಕರೆದಳು. ಎಷ್ಟೋ ಸಮಯದ ಮೇಲೆ ಗೆಳತಿಯರಿಬ್ಬರ ಮಿಲನವಾಗುತ್ತಿರುವುದರಿಂದ ಸಮಯದ ಪರಿವೇ ಇಲ್ಲದೆ ಅವರಿಬ್ಬರ ಮಾತು ಸಾಗುತ್ತಿತ್ತು. ತಾಯಿಯ ಕರೆ ಇವರಿಬ್ಬರ ಲೋಕಕ್ಕೆ ಪ್ರವೇಶಿಸಲೇ ಇಲ್ಲ.

ಎಷ್ಟೋ ದಿನದ ಮೇಲೆ ಮನೆಗೆ ಬಂದ ಮಗಳೊಂದಿಗೆ ಸ್ವಲ್ಪ ಸಮಯ ಕಳೆಯೋಣ ಎಂದು ಲೀಲಾ ಬೇಗಬೇಗನೆ ಹಸು ಗಂಗೆಗೆ ಅಕ್ಕಚ್ಚು ಕೊಟ್ಟು.. ಹಾಲು ಕರೆದು, ಕರು ತುಂಗೆಗೆ ಹಾಲು ಕುಡಿಯಲು ಬಿಟ್ಟು ಬಂದಳು. ರಾತ್ರಿ ಅಡುಗೆಗೆ ಏನು ಮಾಡಲಿ ಎಂದು ಯೋಚಿಸುತ್ತಿರುವಾಗ, ಹಿತ್ತಲಲ್ಲಿ ಬೆಳೆಯಲು ಹಾಕಿದ ಬಸಲೆ ನೆನಪಾಯಿತು. ಮಗಳಿಗೆ ಇಷ್ಟವಾದ ಬಸಲೆ ಮತ್ತು ಬದನೆ ಕಾಯಿಯನ್ನು ಕಿತ್ತು ತಂದಳು. ರಾತ್ರಿಯ ಊಟದ ವ್ಯವಸ್ಥೆಯೇನೋ ಆಯ್ತು.. ಆದರೆ ತುಂಬ ಸಮಯದ ನಂತರ ಮನೆಗೆ ಬಂದ ಮಗುವಿಗೆ ಏನಾದರೂ ಸಿಹಿ ಮಾಡಿ ಕೊಡಬೇಕಲ್ಲ..! ಇದರ ಬಗ್ಗೆ ನಾನು ಯೋಚಿಸಲೇ ಇಲ್ಲ.. ನನ್ನ ಮರೆವಿಗಿಷ್ಟು... ಎಂದು ಲೀಲಾ ಮನದಲ್ಲೆ ತನ್ನನ್ನು ಬೈಯ್ದುಕೊಂಡಳು. ಮಳೆಗಾಲಕ್ಕೆಂದು ಸ್ವಲ್ಪ ಗೆಣಸಿನ ಹಪ್ಪಳ ಮಾಡಿದ್ದೆ. ಅದನ್ನು ಸ್ವಲ್ಪ ಕೊಡುತ್ತೇನೆ. ತಿಂಗಳಿಗಾಗುವಷ್ಟು ಕೋಡು ಬಳೆ, ಚಕ್ಕುಲಿ, ಲಡ್ಡುವನ್ನಾದರೂ ಮಾಡಿಕೊಡಬೇಕು. ಪಾಪ ಮಗು.. ವಸತಿ ಗೃಹದಲ್ಲಿ ಹೊತ್ತು ಹೊತ್ತಿಗೆ ಸರಿಯಾಗಿ ಊಟ ಸಿಗುತ್ತೋ.. ಇಲ್ಲವೋ.. ಇದು ಅವಳ ವೈದ್ಯಕೀಯ ತರಬೇತಿಯ ಕೊನೆಯ ವರ್ಷ. ಇನ್ನೇನು ಪರೀಕ್ಷೆ ಮುಗಿದು ನನ್ನ ಮಗು ತನ್ನ ಕಾಲ ಮೇಲೆ ನಿಂತುಕೊಳ್ಳುತ್ತಾಳೆ. ಈ ಐದು ವರ್ಷ ಮಗಳನ್ನು ಬಿಟ್ಟು ಒಬ್ಬಳೆ ಕಳೆದ ಕ್ಷಣ ನನಗೇ ಗೊತ್ತು.. ಒಂದೊಂದು ದಿನವೂ ವರ್ಷದ ಹಾಗೆ ಕಳೆಯಿತು. ಮಗಳ ಓದಿಗಾಗಿ ಮಾಡಿದ ಸಾಲ ಬಹುಬೇಗನೆ ತೀರಿಸಿ ಮಗಳಿಗೆ ಒಂದು ಒಳ್ಳೆಯ ವರನನ್ನು ನೋಡಿ ಮದುವೆ ಮಾಡಿದರೆ ತನ್ನ ಬಾಳು ಸಾರ್ಥಕವಾದಂತೆ. ಇಷ್ಟೆಲ್ಲ ಯೋಚಿಸುತ್ತಿರುವಾಗಲೇ ಅವಳ ಕೆಲಸ ಎಲ್ಲ ಮುಗಿಯಿತು. ಅನಂತರ ಹೊರಗೆ ಬಂದು ಜಗಲಿಯ ಮೇಲೆ ಕುಳಿತು ಮಗಳ ದಾರಿ ಕಾಯು ತೊಡಗಿದಳು. ಹಾಗೆ ಸುಮ್ಮನೆ ಜಗಲಿಯಲ್ಲಿ ಒರಗಿಕೊಂಡಿರುವಾಗ ಅವಳಿಗೆ ಅರಿವಿಲ್ಲದಂತೆ ಅವಳ ಮನಸ್ಸು ತನ್ನ ಗತಕಾಲದ ನೆನಪನ್ನು ಮೆಲುಕು ಹಾಕತೊಡಗಿತು.

ಲೀಲಾ, ಎಲ್ಲರಂತೆ ಒಂದು ಸಾಮಾನ್ಯ ಹೆಂಗಸು. ಚಿಕ್ಕವಳಿರುವಾಗಲೇ ತಂದೆ ತಾಯಿಯನ್ನು ಕಳೆದುಕೊಂಡು, ಸೋದರ ಮಾವನ ಆಶ್ರಯದಲ್ಲಿ ಬೆಳೆದರೂ, ಆ ಮನೆಯಲ್ಲಿ ಅವಳ ಪಾಡು ಮನೆ ಕೆಲಸದವಳಿಗಿಂತಲೂ ಕಡೆಯಾಗಿತ್ತು. ಮಾವನ ಅಸಹಾಯಕ ಪ್ರೀತಿಯೊಂದಿಗೆ, ಸೋದರತ್ತೆ ಕೊಟ್ಟ ಕಷ್ಟವನ್ನು ತುಟಿ ಕಚ್ಚಿ ಸಹಿಸಿಕೊಂಡು ಬಂದಳು ಲೀಲಾ. ಲೀಲಾ ಎಂದೂ ತನ್ನ ಭವಿಷ್ಯದ ಬಗ್ಗೆ ಕನಸು ಮನಸ್ಸಿನಲ್ಲೂ ಯೋಚಿಸಿದವಳಲ್ಲ. ಸೋದರತ್ತೆ ಖರ್ಚು ಉಳಿಸಲೆಂದು ತನ್ನ ಸ್ವಂತ ತಮ್ಮನೊಂದಿಗೆ ಲೀಲಾಳನ್ನು ಕೊಟ್ಟು ಮದುವೆ ಮಾಡಿಸುವ ತೀರ್ಮಾನ ಕೈಗೊಂಡರೂ, ಒಂದು ಮಾತೂ ಎದುರಾಡಿದವಳಲ್ಲ ಲೀಲಾ. ಬಾಣಲೆಯಿಂದ ಎಣ್ಣೆಗೆ ಜಾರಿ ಬಿದ್ದ ಪರಿಸ್ಥಿತಿ ಲೀಲಾಳದ್ದು. ಸೋದರತ್ತೆ ಏನೋ ಮದುವೆ ಮಾಡಿಸಿ ಕೈತೊಳೆದುಕೊಂಡಳು. ಮದುವೆಯ ಬಗ್ಗೆ ಕನಸು ಮನಸಿನಲ್ಲೂ ಯೋಚಿಸದ ಲೀಲಾ, ಸೋದರತ್ತೆ ಮಾಡುತ್ತಿರುವುದು ನನ್ನ ಮದುವೆಯಲ್ಲ, ಒಂದು ನರಕದಿಂದ ಇನ್ನೊಂದು ನರಕಕ್ಕೆ ತಳ್ಳುತ್ತಿರುವುದು ಅಂತ ಗೊತ್ತಿದ್ದರೂ ಲೀಲಾ ಕಣ್ಣುಮುಚ್ಚಿಕೊಂಡು ಸೋದರತ್ತೆ ತೋರಿಸಿದ ದಾರಿಯಲ್ಲಿ ನಡೆದಳು. ಪಾಲಿಗೆ ಬಂದದ್ದು ಪಂಚಾಮೃತ ಅಂತ ಅಂದುಕೊಂಡು ಕುಡುಕ ಹಾಗೂ ಸೋಮಾರಿಯೂ ಆಗಿದ್ದ ಗಂಡನೊಂದಿಗೆ ಲೀಲಾ ಹೊಸ ಬಾಳಿಗೆ ಕಾಲಿಟ್ಟಳು. ಆಕೆಯ ಗಂಡ ಪರಮೇಶಿಗೆ ಸ್ವಂತ ಆಸ್ತಿಯೇನೂ ಇಲ್ಲದಿದ್ದರೂ ಹೇಳಿಕೊಳ್ಳಲಿಕ್ಕೆ ಅವನದ್ದೇ ಆದ ಒಂದು ಗುಡಿಸಲಿತ್ತು. ಲೀಲಾ ಹೊಟ್ಟೆ ಪಾಡಿಗೆ ಏನಾದರೂ ಕೆಲಸ ಮಾಡಬೇಕಲ್ಲ ಅದಕ್ಕೆ ಪಕ್ಕದಲ್ಲಿ ಇರುವ ಬ್ರಾಹ್ಮಣರ ಮನೆಗೆ ಕೆಲಸಕ್ಕೆ ಹೋಗಲು ಪ್ರಾರಂಭಿಸಿದಳು. ಬಿಡುವಿನ ಸಮಯದಲ್ಲಿ ಬೀಡಿ ಕಟ್ಟಲಿಕ್ಕೆ ಶುರು ಮಾಡಿದಳು. ಎಷ್ಟೇ ದುಡಿದು ತಂದರೂ ಹೊಟ್ಟೆಗೆ ಸಾಕಾಗುತ್ತಿರಲಿಲ್ಲ. ಮೇಲಿಂದ ಕುಡುಕ ಗಂಡ ಬೇರೆ ಇವಳ ಸಂಪಾದನೆಯನ್ನೆಲ್ಲ ಮುಕ್ಕಿ ಹಾಕುತ್ತಿದ್ದ. ಕುಡುಕ ಗಂಡನಿಗೆ ಗೊತ್ತಿಲ್ಲದ ಹಾಗೆ ಅವನ ಕಣ್ಣು ತಪ್ಪಿಸಿ ಹಣವನ್ನು ಅಲ್ಲಿ ಇಲ್ಲಿ ಬಚ್ಚಿಡುತ್ತಿದ್ದಳು. ಮನೆಯ ಹಿತ್ತಿಲಿನಲ್ಲಿ ಮನೆಗೆ ಬೇಕಾಗುವ ತರಕಾರಿಯನ್ನು ಬೆಳೆಯಲು ಶುರುಮಾಡಿದಳು. ಬೆಂಡೆ, ಬದನೆ, ತೊಂಡೆ ಕಾಯಿ, ಬಸಲೆ ಬೆಳೆಸಿದಳು. ತನಗೆ ಬೇಕಾಗುವಷ್ಟು ಇಟ್ಟುಕೊಂಡು ಉಳಿದಿದ್ದನ್ನು ಊರಿನ ಸಂತೆಯ ದಿನ ತೆಗೆದುಕೊಂಡು ಹೋಗಿ ಮಾರಿ ಬರುತ್ತಿದ್ದಳು. ಹೀಗೆ ಲೀಲಾಳ ಜೀವನ ಸಾಗುತ್ತಿತ್ತು. ಅವಳಿಗೆ ಅರಿವಿಲ್ಲದಂತೆ ಒಂದು ರೀತಿಯ ಧೈರ್ಯ ಅವಳಲ್ಲಿ ಮನೆ ಮಾಡಿತ್ತು. ಹೆಸರಿಗೆ ಮಾತ್ರ ಗಂಡನಿದ್ದರೂ ಮನೆಯ ಎಲ್ಲ ಜವಾಬ್ದಾರಿ ತನ್ನ ಹೆಗಲ ಮೇಲಿದ್ದರೂ ಲೀಲಾ ಧೃತಿಗೆಡಲಿಲ್ಲ. ಈ ಮಧ್ಯೆ ಲೀಲಾ ಪರಮೇಶಿಯಿಂದ ಒಂದು ಹೆಣ್ಣು ಮಗುವನ್ನು ಪಡೆದಿದ್ದಳು. ಲೀಲಾ ಗಂಡಾಳಿನಂತೆ ದುಡಿದು ತಂದು ಹಾಕಿದರೂ ಕಲ್ಲು ಹೃದಯದ ಪರಮೇಶಿಗೆ ಏನೂ ಅನಿಸುತ್ತಿರಲಿಲ್ಲ. ಅವನಿಗೆ ಬೇಕಾದಾಗ ದುಡ್ಡು ಕೊಡಬೇಕು ಅಷ್ಟೇ. ಇಲ್ಲದಿದ್ದರೆ ದನಕ್ಕೆ ಬಡಿದ ಹಾಗೆ ಬಡಿದು ಅವಳಲ್ಲಿದ್ದ ಹಣವನ್ನು ದೋಚಿಕೊಂಡು ಹೋಗುತ್ತಿದ್ದ. ಲೀಲಾಳಿಗೆ ಒಮ್ಮೊಮ್ಮೆ ಅನಿಸುವುದುಂಟು ಗಂಡು ಹೆಣ್ಣನ್ನು ಮದುವೆಯಾಗಿ ಕರೆದುಕೊಂಡು ಬಂದು, ಪ್ರೀತಿಯಿಂದ ಅವಳ ಎಲ್ಲ ಜವಾಬ್ದಾರಿಯನ್ನು ನಿಬಾಯಿಸುತ್ತಾನೆ. ಆದರೆ ನನ್ನ ಪರಿಸ್ಥಿತಿ ನೋಡಿದರೆ, ನಾನೊಬ್ಬಳು ಹೆಣ್ಣಾಗಿ ಒಂದು ಗಂಡನ್ನು ಮದುವೆ ಮಾಡಿಸಿಕೊಂಡ ಬಂದ ಹಾಗಿದೆ.. ಲೀಲಾ ತನಗೇ ತಾನೇ ಸಮಾಧಾನ ಮಾಡಿಕೊಳ್ಳುವುದುಂಟು.. ಸಮಸ್ಯೆಯಿಲ್ಲದ ಬಾಳು ಬಾಳಲ್ಲ. ಹೊಸ ಹೊಸ ಸಮಸ್ಯೆಯನ್ನು ಬಿಡಿಸುವುದರಲ್ಲಿ ಒಂದು ರೀತಿಯ ಸುಖವಿದೆ. ಒಂದು ಸಮಸ್ಯೆಯಿಂದ ಹೊರ ಬರುತ್ತಿರುವಾಗಲೇ ನಾವು ಗಟ್ಟಿಯಾಗುತ್ತೇವೆ. ಇನ್ನೊಂದು ಸಮಸ್ಯೆಯನ್ನು ಎದುರಿಸಲು ಮಾನಸಿಕವಾಗಿ ಸಿದ್ಧರಾಗುತ್ತೇವೆ. ಎಲ್ಲರ ಜೀವನದಲ್ಲಿ ಏರು ಪೇರು ಇದ್ದೇ ಇದೆ. ಜೀವನದಲ್ಲಿ ಏಕತಾನತೆ ಇದ್ದರೆ ಆ ಬದುಕಿಗೆ ಏನೂ ಸ್ವಾರಸ್ಯ ಉಳಿದಿರುವುದಿಲ್ಲ. ನಮ್ಮ ಕೈ ನಮಗೆ ತಲೆದಿಂಬಾಗುವಂತೆ ನಮ್ಮ ನಮ್ಮ ಬದುಕಿಗೆ ನಾವೇ ತೀರ್ಪುಗಾರರು. ಇನ್ನೊಬ್ಬರ ಮೇಲೆ ಅವಲಂಬಿಸಿದ ಬಾಳ ನೌಕೆ ತುಂಬಾ ದಿನ ಮುಂದೆ ಸಾಗಲಾರದು ಎನ್ನುವುದನ್ನು ಲೀಲಾ ತನ್ನ ಅನುಭವದಿಂದ ಕಂಡುಕೊಂಡಿದ್ದಳು.

ಪರಮೇಶಿ ಕುಡಿದು ಶ್ಯಾಮಲಮ್ಮನ ಗದ್ದೆಯ ಬದಿಯಲ್ಲಿ ಬಿದ್ದುಕೊಂಡಿದ್ದ ಸುದ್ದಿಯನ್ನು ಪಕ್ಕದ ಮನೆಯ ತಿಮ್ಮಣ್ಣ ಬಂದು ತಿಳಿಸಿದಾಗಲಂತೂ ಲೀಲಾಗೆ ಈ ಭೂಮಿ ಬಾಯಿಬಿಟ್ಟು ತನ್ನನ್ನು ಒಳಗೆ ಎಳೆದುಕೊಳ್ಳಬಾರದೆ ಅನಿಸಿದುಂಟು. ತಾನು ಮಾಡುತ್ತಿದ್ದ ಕೆಲಸವನ್ನು ಅಲ್ಲಿಯೇ ಬಿಟ್ಟು ಒಂದೇ ಉಸಿರಿನಲ್ಲಿ ಆ ಕಡೆಗೆ ಓಡಿದಳು. ಕಣ್ಣೀರ ಧಾರೆಯನ್ನು ಸೆರಗಂಚಿನಲ್ಲಿ ಒರೆಸುತ್ತಾ, ಪ್ರಜ್ಞೆಯಿಲ್ಲದೆ ಬಿದ್ದಿದ್ದ ಗಂಡನನ್ನು ಹೆಗಲ ಮೇಲೆ ಹಾಕಿಕೊಂಡು ತಂದು ಮನೆಯ ಎದುರುಗಡೆ ಇರುವ ಬಾವಿಕಟ್ಟೆಗೆ ಒರಗಿಸಿ ಕೂರಿಸಿದಳು. ದೊಟ್ಟೆಯಿಂದ ನೀರನ್ನು ಸೇದಿ ದಸದಸನೆ ಪರಮೇಶಿಯ ತಲೆಮೇಲೆ ಸುರಿದಳು. ಒಂದೇ ಸಮನೆ ನೆತ್ತಿಯ ಮೇಲೆ ನೀರು ಬಿದ್ದ ಮೇಲೆ ಕುಡಿದ ಅಮಲೆಲ್ಲ ಇಳಿದಿದ್ದರಿಂದ ಎದ್ದು ನಿಂತ ಪರಮೇಶಿ ಹೆಂಡತಿಯನ್ನು ದುರುದುರು ನೋಡುತ್ತಾ ಮನೆಯ ಕಡೆ ಸಾಗಿದನು. ಕೈಯಲ್ಲಿದ ಕೊಡಪಾನವನ್ನು ಹಾಗೆ ಹಿಡಿದುಕೊಂಡು ನಿಂತಿರುವ ಲೀಲಾ ಕೊನೆಗೂ ಇಂತಹ ದಿನವನ್ನು ಭಗವಂತ ತೋರಿಸಿದನಲ್ಲ. ನಾನು ಆ ಭಗವಂತನಲ್ಲಿ ಏನನ್ನೂ ಕೇಳಲಿಲ್ಲ. ಒಂದು ಮರ್ಯಾದೆಯ ಜೀವನವನ್ನು ಕರುಣಿಸು ಎಂದು ಬೇಡಿಕೊಂಡಿದ್ದೆ. ಗಂಡಸಿನಂತೆ ಮನೆಯಲ್ಲಿ ದುಡಿಯಬೇಕಾದರೂ ಮನಸ್ಸಿಗೆ ಇಷ್ಟು ನೋವಾಗಿರಲಿಲ್ಲ. ಗಂಡನನ್ನು ಹೆಗಲ ಮೇಲೆ ಹಾಕಿಕೊಂಡು ಬರುತ್ತಿರುವಾಗ ಅಕ್ಕಪಕ್ಕದವರ ಹಾಸ್ಯಪೂರಿತ ದೃಷ್ಟಿ ನನ್ನನ್ನು ಚುಚ್ಚಿ ಚುಚ್ಚಿ ಘಾಸಿಗೊಳಿಸಿದವು. ಯಾವ ಜನ್ಮದ ಪಾಪ ಈ ಜನ್ಮದಲ್ಲಿ

✍ ಡಾ. ಜ್ಯೋತಿ ಸತೀಶ್

ಕಾಡುತ್ತಿದೆಯೋ ಒಂದೂ ಕಾಣೆ. ಆ ದೇವರು ನನ್ನ ಹಣೆಯಲ್ಲಿ ಸುಖ ಎಂಬ ಎರಡು ಅಕ್ಷರ ಬರೆಯಲೇ ಇಲ್ಲವೇ?.. ಚಿಕ್ಕಂದಿನಿಂದಲೂ ಕಷ್ಟಪಡುತ್ತಾ ಬಂದಿರುವ ನನಗೆ ಮದುವೆಯಾದ ಮೇಲಾದರೂ ಗಂಡನಿಂದ ಸುಖದ ಭಾಗ್ಯ ದೇವರು ನನ್ನ ಹಣೆಯಲ್ಲಿ ಬರೆಯಲಿಲ್ಲ. ನಾನು ಪಡುತ್ತಿರುವ ಕಷ್ಟವನ್ನು ನೋಡಿಯೂ ಆ ಭಗವಂತನಿಗೆ ಹೊಟ್ಟೆ ತುಂಬಲಿಲ್ಲ ಅಂತ ಕಾಣುತ್ತೆ. ಅದಕ್ಕೆ ನನ್ನ ಹೊಟ್ಟೆಯಲ್ಲಿ ಇನ್ನೊಂದು ಹೆಣ್ಣಿನ ಜನ್ಮ ನೀಡಿದ ಅಂತ ಕಾಣುತ್ತದೆ. ಇನ್ನು ಆ ಕೂಸಿನ ಹಣೆಯಲ್ಲಿ ಏನು ಬರೆದಿದ್ದನೊ ಆ ಭಗವಂತನೇ ಬಲ್ಲ. ಹರಿಯುತ್ತಿರುವ ಕಣ್ಣೀರನ್ನು ಒರೆಸಿಕೊಳ್ಳುತ್ತಾ, ಭಗವಂತ ನೀನು ಎಷ್ಟು ಕಷ್ಟ ಕೊಟ್ಟರೂ ಸಹಿಸಿಕೊಳ್ಳುವ ತಾಕತ್ತು ಈ ಎದೆಗೆ ಇದೆ. ಆದರೆ ನನ್ನ ಈ ಭಾಗ್ಯವನ್ನು ವಂಶಪಾರಂಪರ್ಯಗೊಳಿಸಬೇಡ. ಅದರ ಪಾಲಿನ ಕಷ್ಟವನ್ನೂ ನನಗೇ ಕೊಟ್ಟು ಬಿಡು ಎಂದು ದೇವರಲ್ಲಿ ಮೊರೆ ಹೋಗಿ ಮೈಮರೆತಿದ್ದವಳನ್ನು ಮಗುವಿನ ಅಳು ಎಚ್ಚರಿಸಿತು. 'ಥೂತ್ ನನ್ನ ಯೋಚನೆಗೆ ಬೆಂಕಿ ಹಾಕ... ಪಾಪ ಕೂಸಿಗೆ ಹಸಿವಾಗುತ್ತಿರಬಹುದು, ಇನ್ನೂ ರಾತ್ರಿ ಅಡುಗೆ ಮಾಡಿಲ್ಲ. ಮೊದಲು ಮಗುವಿಗೆ ಹಾಲುಣಿಸುವೆ ಎಂದು ಮಗುವನ್ನು ಎತ್ತಿ ಎದೆಗೆವಚಿಕೊಂಡಳು. ಆ ಕ್ಷಣದಲ್ಲಿ ತನಗೆ ಒದಗಿದ ಎಲ್ಲ ಕಷ್ಟವನ್ನು ಮರೆತು, ತಾಯಿತನದ ಸುಖವನ್ನು ಅನುಭವಿಸಿದಳು. ಮಗುವಿಗೆ ಹಾಲುಣಿಸಿದ ನಂತರ ಒಳನಡೆದ ಲೀಲಾ ರಾತ್ರಿಯ ಅಡುಗೆಯ ತಯಾರಿ ಮಾಡಿದಳು. ಹಸಿ ಕಟ್ಟಿಗೆಯಿಂದ ಒಲೆ ಉರಿಯದಿದ್ದರೂ, ಊದಿ ಊದಿ ಕಣ್ಣೆಲ್ಲ ಕೆಂಪಾಯಿತು. ಹೇಗೂ ಹತ್ತಿಕೊಂಡ ಬೆಂಕಿಯಲ್ಲಿ ಗಂಜಿಯನ್ನು ಮಾಡಿ, ಬದನೆ ಕಾಯಿಯ ಚಟ್ನಿಯನ್ನು ಮಾಡಿ, ಮಲಗಿದ್ದ ಗಂಡನನ್ನು ಎಬ್ಬಿಸಿ ಊಟಕ್ಕೆ ಬಡಿಸಿದಳು. ಹೆಂಡತಿ ತಂದಿಟ್ಟ ಊಟವನ್ನು ಉಂಡು ಹೊರಗೆ ಹೊರಟನು. ಗಂಡ ಬಿಟ್ಟ ಬಟ್ಟಲಿನಲ್ಲೆ ಸ್ವಲ್ಪ ಗಂಜಿಯನ್ನು ಹಾಕಿಕೊಂಡು ಊಟ ಮಾಡಿದಳು ಲೀಲಾ. ನೋವಿನಿಂದ ಮನ ಭಾರವಾಗಿದ್ದರೂ, ಹೊಟ್ಟೆಯ ತಾಳಕ್ಕೆ ಮಣಿಯಲೇ ಬೇಕಾಯ್ತು. ಪಾತ್ರೆಯನ್ನೆಲ್ಲ ತೊಳೆದು, ಹರಿದ ಚಾಪೆಯನ್ನು ಹಾಸಿಕೊಂಡು ಗಂಡನ ಬರವನ್ನು ಕಾಯುತ್ತಾ ಅಲ್ಲೇ ಒರಗಿದಳು. ಇನ್ನೇನೂ ಕಣ್ಣಿಗೆ ನಿದ್ದೆಯ ಮಂಪರು ಹತ್ತಿ ನಿದ್ರಾದೇವಿಯ ವಶವಾಗುವುದರಲ್ಲಿದ್ದಾಗ ಗಂಡ ಪರಮೇಶಿಯ ಸ್ಪರ್ಶ ಅವಳನ್ನು ನಿದ್ದೆಯಿಂದ ಎಚ್ಚರಿಸಿತು. ಮೃಗದ ಹಾಗೆ ಮೈ ಮೇಲೆ ಬಿದ್ದ ಗಂಡನನ್ನು ತಳ್ಳಲಿಕ್ಕೆ ಆಗದೆ, ಒಲ್ಲದ ಮನಸ್ಸಿನಿಂದ, ಅಸಹಾಯಕತೆಯಿಂದ ಅವನಿಗೆ ತನ್ನನ್ನು ಒಪ್ಪಿಸಿಕೊಂಡಳು. ತನ್ನ ತೀಟೆಯನ್ನು ತೀರಿಸಿಕೊಂಡ ಮೇಲೆ ಪರಮೇಶಿ ಪಕ್ಕಕ್ಕೆ ಸರಿದು ಮಲಗಿಕೊಂಡ. ಸ್ವಲ್ಪ ಹೊತ್ತಿನಲ್ಲಿ ಗೊರಕೆಯ ಶಬ್ದ ಕೇಳಿಸ ತೊಡಗಿತು. ಲೀಲಾಳ ಮನಸ್ಸು ನೋವಿನಿಂದ ನರಳುತ್ತಿತ್ತು. ಹೆಣ್ಣಿಗೆ ಇಷ್ಟವಿಲ್ಲದಿದ್ದರೂ ಈ ಕಾರ್ಯಕ್ಕೆ ತನ್ನನ್ನು ಒಡ್ಡಿಕೊಳ್ಳುತ್ತಾಳೆ. ಈ ಪ್ರಪಂಚದಲ್ಲಿ ಹೆಣ್ಣಿಗೆ ಯಾವ ಸ್ಥಾನವೂ ಇಲ್ಲ. ಗಂಡಸು ಆಡಿಸಿದಂತೆ ಆಡುವುದು ಮಾತ್ರ ಅವಳ ಪಾಲಿಗಿದ್ದ ಭಾಗ್ಯ. ಇದು ಅವಳ ಅಸಹಾಯಕತೆ. ತನ್ನ ಭಾಗ್ಯಕ್ಕೆ ತಾನೇ ಮರುಗುತ್ತಿರುವಷ್ಟರಲ್ಲಿ ಬೆಳಗಾಗಿತ್ತು. ಹಾಸಿಗೆಯಿಂದ ಎದ್ದು ಕೂಡಲೇ ಮೊದಲು ಒಲೆಗೆ ಬೆಂಕಿ ಹತ್ತಿಸಿ, ಮೊದಲು ಸ್ವಲ್ಪ ತೌಡನ್ನು ಹಾಕಿ ಅಕ್ಕಚ್ಚನ್ನು ಬಿಸಿ ಮಾಡಿದಳು. ರಾತ್ರಿ ಉಳಿದ ಗಂಜಿಯನ್ನು ಕೂಡ ಅದಕ್ಕೆ ಹಾಕಿ ಬೆರೆಸಿದಳು. ಸ್ವಲ್ಪ ಬೆಚ್ಚಗಿರುವಾಗಲೇ ಗಂಗೆಗೆ ಕೊಟ್ಟು ಬಂದಳು. ನಂತರ ನೀರು ಚೊಂಬನ್ನು ಹಿಡಿದು ಹಾಲು ಕರೆಯಲೆಂದು ಹಟ್ಟಿಗೆ ತೆರಳಿದಳು. ಹಸು ಗಂಗೆಯನ್ನು ಲೀಲಾ ತನ್ನದೇ ಒಡಲ ಕೂಸು ಎಂಬಂತೆ ಸಾಕಿ ಬೆಳೆಸಿದ್ದಳು. ಅವಳೆಲ್ಲ ನೋವಿಗೆ ಮೂಕ ಸಾಕ್ಷಿಯಾಗಿದ್ದುದು ಈ ಗಂಗಾ ಮಾತ್ರ. ತನ್ನ ಕಣ್ಣೀರನ್ನು ಒರೆಸಲು ತನ್ನೊಂದಿಗೆ ಯಾರಿರದಿದ್ದರೂ ಬಾಯಿ ಬಾರದ ಗಂಗಾಳ ಬಳಿ ತನ್ನೆಲ್ಲ ದುಃಖವನ್ನು ತೋಡಿಕೊಳ್ಳುತ್ತಿದ್ದಳು. ಆಗ ಗಂಗಾ ಅವಳ ಮೈಯನ್ನು ನೆಕ್ಕುವುದರ ಮೂಲಕ ಅವಳಿಗೆ ಸಾಂತ್ವನವನ್ನು ಹೇಳುತ್ತಿತ್ತು. ಪ್ರಾಣಿಗಳಿಗಿಂತಲೂ ಕಡೆಯಾಗಿ ವರ್ತಿಸುವ ಈ ಮನುಷ್ಯರಿಗಿಂತ ಏನೂ ಅರಿಯದ ಇಂತಹ ಮುಗ್ಧ ಮೂಕ ಪ್ರಾಣಿಯೇ ಲೇಸಲ್ಲವೇ? ಅನಿಸಿತು ಅವಳಿಗೆ.

ಹೀಗೆ ವರ್ಷಗಳು ಉರುಳಿತು, ಲೀಲಾಳ ಜೀವನದೊಂದಿಗೆ ಗುದ್ದಾಟ ಮಾತ್ರ ಹಾಗೆ ಉಳಿಯಿತು. ಆಕೆಗೆ ಜೀವನ ಸರಿದದ್ದೇ ತಿಳಿಯಲಿಲ್ಲ. ಕೋಮಲಳಿಗೆ 5 ವರ್ಷ ತುಂಬುವಾಗ ಆಕೆಯ ಗಂಡ ಅವಳನ್ನು ನಡು ನೀರಿನಲ್ಲಿ ಬಿಟ್ಟು ಪರಲೋಕ ಸೇರಿದನು. ಲೀಲಾ ತನ್ನೆಲ್ಲ ಕಷ್ಟವನ್ನು ಆ ಹೆಣ್ಣು ಕೂಸಿನ ಹಸುಮೊಗವನ್ನು ನೋಡಿ ಮರೆಯುತ್ತಿದ್ದಳು. ಬದುಕುವ ಸೆಲೆಯನ್ನು ಆ ಹೆಣ್ಣು ಮಗುವಿನಲ್ಲಿ ಕಂಡುಕೊಂಡಳು. ತನ್ನ ಬದುಕು ಹಳ್ಳಿಯ ಜೀವನ ದೊಂದಿಗೆ ಅಂಟಿಕೊಂಡು ಬಂದರೂ ತನ್ನ ಮಗಳನ್ನು ಒಳ್ಳೆಯ ರೀತಿಯಲ್ಲಿ ಓದಿಸಬೇಕು ಎಂಬ ಮಹದಾಸೆಯನ್ನು ಹೊತ್ತಕೊಂಡಿದ್ದಳು. ಅದಕ್ಕೆ ಹಗಲಿರುಳೆನ್ನದೆ ಬೆವರು ಸುರಿಸಿ ದುಡಿಯ ಹತ್ತಿದಳು. ಕುಡುಕ ಗಂಡನ ಕರ್ಕರೆ ತಪ್ಪಿದರೂ ಬಡತನ ಅವಳ ಬೆನ್ನು ಬಿಟ್ಟಿರಲಿಲ್ಲ. ಹೊಟ್ಟೆಪಾಡಿಗಾಗಿ ಮೊದಲಿನಿಂದಲೂ ಆಶ್ರಯಿಸಿಕೊಂಡು ಬಂದ ಕೆಲಸ ಬೀಡಿ ಕಟ್ಟುವುದು. ಯಾರ ಆಶ್ರಯವೂ ಇಲ್ಲದೆ ಸ್ವಂತ ಪರಿಶ್ರಮದಿಂದ ಮಗಳೊಂದಿಗೆ ಜೀವನ ಸಾಗಿಸುವ ಛಲದೊಂದಿಗೆ ಈ ಜೀವನವೆಂಬ ಸಮುದ್ರವನ್ನು ಈಜಿ ದಡ ಸೇರಬಲ್ಲೆನೆಂದ ದೃಡತೆ ಅವಳಲ್ಲಿ ಮನೆಮಾಡಿತ್ತು. ಗಂಡ ಸತ್ತ ಹೆಂಗಸು, ಅಬಲೆ ಎಂದು ಯಾರಾದರೂ ಗಂಡಸರು ಕನಿಕರ ತೋರಿಸುತ್ತ ಹತ್ತಿರ ಬಂದರೆ ಮನೆಯ ಮೂಲೆಯಲ್ಲಿ ಬಿದ್ದಿದ್ದ ಹಳೆ ಹಿಡಿಸುಡಿಯನ್ನು ಒನಕೆ ಓಬವ್ವನಂತೆ ಹಿಡಿದುಕೊಳ್ಳುತ್ತಿದ್ದಳು. ಒಂದು ರೀತಿಯಲ್ಲಿ ಬಡತನ ಅವಳ ದೌರ್ಬಲ್ಯವಾಗಿರಲಿಲ್ಲ. ಅವಳ ತಾಕತ್ತಾಗಿತ್ತು. ಎಂತಹ ಕಠಿಣ ಪರಿಸ್ಥಿಯಲ್ಲೂ ಬದುಕಬಲ್ಲೆನೆಂಬ ಆತ್ಮವಿಶ್ವಾಸ ಅವಳಿಗೆ ಕಲಿಸಿಕೊಟ್ಟಿದ್ದೇ ಈ ಬಡತನ. ಬಡತನವಿದ್ದರೂ ನೆಮ್ಮದಿಯುತ ಜೀವನ ಅವಳದ್ದಾಗಿತ್ತು. ತನ್ನ ಮುದ್ದಿನ ಮಗಳೊಂದಿಗೆ ತನ್ನ ಜೀವನವನ್ನು ಬಹು ಆನಂದದಿಂದ ಕಳೆಯುತ್ತಿದ್ದಳು. ತಾನು ಒಂದು ಹೊತ್ತಿನ ಊಟ ಉಂಡು, ಹೊಟ್ಟೆ ಬಟ್ಟೆ ಕಟ್ಟಿ, ಮಗಳನ್ನು ಓದಿಸಿದಳು. ಸಾಲ ಸೋಲ ಮಾಡಿ ಮಗಳ ಆಸೆಯಂತೆ ವೈದ್ಯಕೀಯಕ್ಕೆ ಸೇರಿಸಿದಳು. ಮಗಳನ್ನು ಬಿಟ್ಟು ಒಬ್ಬಳೇ ಇರಬೇಕಾಗಿ ಬಂದರೂ, ಮನಸ್ಸನ್ನು ಕಲ್ಲು ಮಾಡಿಕೊಂಡು ಮಗಳನ್ನು ಸರಕಾರಿ ವಸತಿಗೃಹದಲ್ಲಿ ಇಟ್ಟು ಓದಿಸಿದಳು. ಕೊನೆಯ ವರ್ಷದಲ್ಲಿರುವ ಕೋಮಲಳ ವಿದ್ಯಾಭ್ಯಾಸ ಇನ್ನೇನು ಮೂರು ನಾಲ್ಕು ತಿಂಗಳಲ್ಲಿ ಮುಗಿಯುವ ಹಂತದಲ್ಲಿತ್ತು. ಎಷ್ಟೋ ಸಮಯದ ಮೇಲೆ ಬಿಡುವು ಮಾಡಿಕೊಂಡು ಅಮ್ಮನನ್ನು ನೋಡಲು ಊರಿಗೆ ಬಂದಿದ್ದಳು. ದೂರದ ಮಂಗಳೂರಿನಲ್ಲಿದ್ದ ಒಂದೊಂದು ಕ್ಷಣವೂ ಅವಳ ಮನಸ್ಸು ಅಮ್ಮನಿಗಾಗಿ ಹಪಹಪಿಸುತ್ತಿತ್ತು. ಆದರೆ ಅಮ್ಮ ಪಟ್ಟ ಕಷ್ಟ ಸಾರ್ಥಕ ಮಾಡ ಬೇಕೆಂದು ತನ್ನ ಮನಸ್ಸಿಗೆ ಲಗಾಮು ಹಾಕಿದ್ದಳು. ಮನಸ್ಸಿಟ್ಟು ಅಧ್ಯಯನ ದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಳು. ಎಲ್ಲದರಲ್ಲೂ ಮುಂದಿದ್ದ ಕೋಮಲಳಿಗೆ ಶಿಷ್ಯವೇತನವೂ ಸಿಕ್ಕಿದ್ದರಿಂದ ಲೀಲಾಳಿಗೆ ಅವಳ ವಿದ್ಯಾಭ್ಯಾಸದ ಖರ್ಚು ಅಷ್ಟೊಂದು ಹೊರೆ ಎನಿಸಲಿಲ್ಲ. ತನ್ನ ಕಾಲು ಸುತ್ತ ಸುಳಿದಾಡುತ್ತಿದ್ದ ಮಗಳು ಎಷ್ಟು ಬೇಗ ಬೆಳೆದು ಬಿಟ್ಟಿದ್ದಾಳೆ. ಎಷ್ಟು ಬೇಗ ವೈದ್ಯಕೀಯ ತರಬೇತಿ ಮುಗಿದು ಹೋಯ್ತು. ನಾನು ಪಟ್ಟ ನೋವಿಗೆ ಕೊನೆಗೂ ಆ ದೇವರು ನನ್ನ ಮೇಲೆ ಕರುಣೆಯ ಹಸ್ತ ಚಾಚಿದ ಎಂದು ಮನಸ್ಸು ಸಂತೃಪ್ತಿಯಿಂದ ನಲಿಯಿತು...

ಗಾಢವಾದ ಆಲೋಚನೆಯಲ್ಲಿ ಮುಳುಗಿದ್ದ ಲೀಲಾಗೆ ಮಗಳು ಕೋಮಲಳ "ಅಮ್ಮಾ"... ಎನ್ನುವ ಕೂಗು ಎಚ್ಚರಿಸಿತು. ಬಹು ಸಮಯದ ನಂತರ ಗೆಳತಿ ಪಾರುವನ್ನು ಭೆಟ್ಟಿಯಾದೆನಲ್ಲ, ಮಾತನಾಡುತ್ತಾ ಹೊತ್ತು ಸರಿದದ್ದೇ ತಿಳಿಯಲಿಲ್ಲ, ಕ್ಷಮಿಸಮ್ಮ. ನೀನು ಕರೆದೆಯಲ್ಲ.. ಯಾಕೆ ಕರೆದದ್ದು? ಎಂದು ಕೇಳಿದಳು. ಏನೂ ಇಲ್ಲ ಹೊತ್ತು ನೆತ್ತಿಗೇರಿದೆ ಇನ್ನೂ ಮನೆಗೆ ಬಾರದಿದ್ದನ್ನು ನೋಡಿ ಕರೆದೆ. ಅಮ್ಮನ ಆತಂಕವನ್ನು ತಿಳಿದ ಕೋಮಲ ನಗುತ್ತಾ ಇನ್ನೂ ನನ್ನನ್ನು ಎಳೆಯ ಮಗುವೆಂದು ಭಾವಿಸಿರುವೆಯಾ ಅಮ್ಮಾ? ನಾಳೆ ನಿನ್ನ ಮಗಳು ದೊಡ್ಡ ಆಸ್ಪತ್ರೆಯಲ್ಲಿ ವೈದ್ಯಳಾಗುವವಳು. ನಿನ್ನ ಬಹುದಿನದ ಕನಸು ನನಸಾಗುವ ದಿನ ಹತ್ತಿರವಾಗಿದೆ. ಇನ್ನು ನಮ್ಮ ಕಷ್ಟಗಳು ದೂರವಾದಂತೆ. ನನಗೆ ಮಂಗಳೂರಿನಲ್ಲಿ ದೊಡ್ಡ ಆಸ್ಪತ್ರೆಯಲ್ಲಿ ಕೆಲಸ ಸಿಕ್ಕಿದೆ. ಪರೀಕ್ಷೆ ಮುಗಿದ ತಕ್ಷಣ ಕೆಲಸಕ್ಕೆ ಸೇರಿಕೊಳ್ಳಲು ತಿಳಿಸಿದ್ದಾರೆ. ನಿನ್ನ ಸರದಿ ಮುಗಿಯಿತು. ಇನ್ನು ನನ್ನ ಸರದಿ. ನನ್ನ ಪ್ರೀತಿಯ ಅಮ್ಮನನ್ನು ಪ್ರೀತಿಯಿಂದ ನೋಡಿಕೊಳ್ಳುವ ಸರಿದು ನನ್ನದು ಎಂದು ಪ್ರೀತಿಯಿಂದ ತಾಯಿಯ ಮಡಿಲಲ್ಲಿ ತಲೆಯಿಟ್ಟು ಒರಗಿದಳು. ಲೀಲಾ ಮಗಳ ತಲೆ ನೇವರಿಸುತ್ತಾ ಮಗಳನ್ನೇ ದಿಟ್ಟಿಸುತ್ತ ನೋಡ ಹತ್ತಿದಳು. ತನ್ನ ಕಾಲು ಸುತ್ತ ಸುಳಿದಾಡುತ್ತಿದ್ದ ಮಗಳು ಎಷ್ಟು ಬೇಗ ಬೆಳೆದು ಬಿಟ್ಟಿದ್ದಾಳೆ ಎಂದು ಆಶ್ಚರ್ಯದಿಂದ ಮುದ್ದಿಸತೊಡಗಿದಳು. ಗತಕಾಲದ ಜೀವನವನ್ನು ನೆನಪಿನಂಗಳದ ಮೂಲಕ ಮತ್ತೊಮ್ಮೆ ಸ್ಪರ್ಶಿಸಿದ್ದರಿಂದ ಅವಳಿಗೆ ಅರಿವಿಲ್ಲದಂತೆ ಅವಳ ಕಣ್ಣಿನಿಂದ ಉದುರಿದ ಮುತ್ತಿನ ಹನಿಗಳು ಭೂತಾಯಿಯನ್ನು ತೊಯ್ದವು.. ■

# ಶ್ರೀಮದ್ ಭಗವದ್ಗೀತೆಯಲ್ಲಿ ಆರೋಗ್ಯ ಸೂತ್ರಗಳು–೨

ನಮ್ಮ ಜೀವನದಲ್ಲಿಯ ಅಧ್ಯಾತ್ಮಿಕ ಹಾಗೂ ಆರೋಗ್ಯದ ಸಮಸ್ಯೆಗಳಿಗೆ ಮೂಲ ಕಾರಣ ನಮ್ಮ ಮನಸ್ಸು. ನಾವು ಸಮಾನತೆಯ ಬಗ್ಗೆ ಮಾತಾಡುತ್ತೇವೆ, ಆದರೆ ನಾವು ಇತರರನ್ನು ಸಮಾನರಾಗಿ ಕಾಣುವುದೇ ಇಲ್ಲ. ಆದ್ದರಿಂದ ಶ್ರೀ ಕೃಷ್ಣ ಹೇಳುತ್ತಾನೆ, 'ಸಮತ್ವಂ ಯೋಗಮುಚ್ಯತೇ' (2–48) ಎಂದು. ಯೋಗಿಯಾದವನೇ ಎಲ್ಲವನ್ನೂ ಸಮದೃಷ್ಟಿಯಿಂದ ನೋಡುತ್ತಾನೆ. 'ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ' (6–29). ಅರ್ಜುನನಿಗೆ ಒಂದು ಪ್ರಶ್ನೆ ಕಾಡುತ್ತದೆ. ಎಲ್ಲ ಸಮಸ್ಯೆಗಳಿಗೂ ಮೂಲ ಕಾರಣವಾದ ಮನಸ್ಸನ್ನು ಹಿಡಿತದಲ್ಲಿಡುವ ಉಪಾಯವೇನು? ಶ್ರೀಕೃಷ್ಣನಿಗೆ ಪ್ರಶ್ನಿಸುತ್ತಾನೆ.

**"ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಮ್ ।**
**ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಮ್॥"–(6–34)**

("ಹೇ ಕೃಷ್ಣ, ಮನಸ್ಸು ಚಂಚಲವಾದದ್ದು. ದೇಹ ಇಂದ್ರಿಯಗಳಿಗೆ ಇಚ್ಛೆಯನ್ನು ಹುಟ್ಟಿಸುವ ಮೂಲಕ ಕ್ಷೋಭೆಯನ್ನು ಉಂಟುಮಾಡುತ್ತದೆ. ವಿವೇಕದಿಂದಲೂ ಕೂಡ ಜಯಿಸಲು ಅಶಕ್ಯವಾದದ್ದು, ದುರ್ವಿಷಯಗಳಲ್ಲಿ ಆಸಕ್ತವಾದದ್ದು ಎನ್ನಿಸುತ್ತಿದೆ. ಇದು ಗಾಳಿಯನ್ನು ಬಟ್ಟೆಯಲ್ಲಿ ಅಥವಾ ಕೊಡದಲ್ಲಿ ತುಂಬಿ ಕಟ್ಟಲು ಯತ್ನಿಸಿದಂತೆ ಅಸಾಧ್ಯ ಎಂದು ನನ್ನ ಅಭಿಪ್ರಾಯ".)

ಈ ಪ್ರಶ್ನೆಗೆ ಶ್ರೀ ಕೃಷ್ಣ ಅಷ್ಟೇ ಮಾರ್ಮಿಕ ಉತ್ತರ ಕೊಡುತ್ತಾನೆ.

**"ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್।**
**ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ॥ –(6–35)**

("ಕುಂತೀ ಪುತ್ರನಾದ ಮಹಾ ಬಲಶಾಲಿಯಾದ ಅರ್ಜುನನೇ, ಮನಸ್ಸು ಚಂಚಲ ಎಂಬುವುದರಲ್ಲಿ ಸಂಶಯವಿಲ್ಲ. ಅದನ್ನು ಸ್ವಾಧೀನಪಡಿಸಿಕೊಳ್ಳುವುದು ಅತ್ಯಂತ ಕಷ್ಟಕರವಾದುದು. ಆದರೆ ಕ್ರಮಪ್ರಾಪ್ತವಾದ ಅಭ್ಯಾಸದಿಂದ, ಮತ್ತು ವೈರಾಗ್ಯದಿಂದ ( ಇಂದ್ರಿಯಾದಿಗಳ ಜಯಸಾಧಿಸಲು ವಿಷಯಾದಿಗಳ ನಿವೃತ್ತಿಯಿಂದ) ಮನವನ್ನು ಗೆಲ್ಲಲು ಸಾಧ್ಯ.")

ಪತಂಜಲಿ ಮಹರ್ಷಿಗಳು ಕೂಡ ಇದೇ ಮಾತನ್ನು ಪುನರುಚ್ಚರಿಸುತ್ತಾರೆ. 'ಮನಸ್ಸನ್ನು ಅಭ್ಯಾಸ ಹಾಗೂ ವೈರಾಗ್ಯಗಳಿಂದ ನಿರೋಧಿಸಬಹುದು' ಎನ್ನುತ್ತಾರೆ. ("ಅಭ್ಯಾಸ ವೈರಾಗ್ಯಾಭ್ಯಾಂ ತನ್ನಿರೋಧಃ– ಯೋಗಸೂತ್ರ: 1–2). ಟಿಪ್ಪಣಿಕಾರರು ಈ ಸೂತ್ರವನ್ನು ವಿವರವಾಗಿ ವಿಶ್ಲೇಷಿಸುತ್ತಾರೆ.

ಮೇಲಿನ ಎರಡು ಸೂತ್ರಪ್ರಾಯವಾದ ಶ್ಲೋಕಗಳು ನನ್ನ ಮೇಲೆ ಬಹಳ ಪರಿಣಾಮವನ್ನುಂಟು ಮಾಡಿದ ಸಂದರ್ಭ ನೆನಪಾಗುತ್ತದೆ. ಒಂದು ದಶಕದ ಹಿಂದೆ ರಾಮೇಶ್ವರ ಪ್ರಯಾಣಕ್ಕೆ ಹೊರಟಾಗ ಮಾರ್ಗದಲ್ಲಿ (ಕುಂಭಕೋಣಂದಲ್ಲಿ) ಶ್ರೀ ವಾದಿರಾಜಾಚಾರ್ಯ ಸುಬ್ಬಣ್ಣಾಚಾರ್ಯ ಪಂಚಮುಖಿಯವರ ಭೆಟ್ಟಿಯಾಯ್ತು. ಅವರು 'ಭವದ್ಗೀತೆ ನಿತ್ಯಪಾಠ' ಎಂಬ ಮೂರು ಭಾಗಗಳ ಪುಸ್ತಕ ಬರೆದಿದ್ದಾರೆ. (ಈಗ ಅವರು ಸಂನ್ಯಾಸಾಶ್ರಮ ಸ್ವೀಕರಿಸಿ ಪ್ರಯಾಗದಲ್ಲಿ ಪಾಠಪ್ರವಚನದಲ್ಲಿ ತೊಡಗಿದ್ದಾರೆ.) ಆರನೆಯ ಅಧ್ಯಾಯದಲ್ಲಿ ಬರುವ ಮೇಲಿನ ಎರಡು ಶ್ಲೋಕಗಳನ್ನು ಅವರೊಡನೆ ಚರ್ಚಿಸಿದೆ. ಆಗ ಅವರು ಒಂದು ಕತೆಯನ್ನು ನನಗೆ ಹೇಳಿದರು.

ಒಬ್ಬ ಧನಿಕ ಜಮೀನುದಾರನಿದ್ದ. ಅವನ ಹೊಲಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಕೊರತೆ ಇತ್ತು. ಕೆಲಸದವರು ನಿಯಮಿತವಾಗಿ ಕೆಲಸ ಮಾಡುತ್ತಿರಲಿಲ್ಲ. ಅವನು ಶಿವನ ಉಪಾಸಕನಾಗಿದ್ದ. ಒಳ್ಳೆಯ ಕೆಲಸಗಾರರನ್ನು ಕಳಿಸಲು ದೇವರಲ್ಲಿ ಮೊರೆಯಿಟ್ಟ. ಸ್ವಪ್ನದಲ್ಲಿ ಶಿವನು ಪ್ರತ್ಯಕ್ಷನಾದ. 'ನಾನು ಭೂತಗಣದಲ್ಲಿ ಒಬ್ಬನನ್ನು ಕಳಿಸುವೆ. ನಿನ್ನ ಎಲ್ಲ ಕೆಸಗಳನ್ನು ಅವನು ಮಾಡುವನು. ಆದರೆ ಅವನಿಗೆ ಯಾವಾಗಲೂ ಕೆಲಸ ಕೊಡಬೇಕು. ಕೆಲಸವಿಲ್ಲದಿದ್ದರೆ ಅವನು ನಿನ್ನ ಜೀವತಿನ್ನುತ್ತಾನೆ.' ಎಂದು ಹೇಳಿದ. ತನ್ನ ಹೊಲದಲ್ಲಿ ಸಾಕಷ್ಟು ಕೆಲಸ ಇದ್ದುದರಿಂದ ಆ ಪ್ರಸಂಗ ಬರಲಿಕ್ಕಿಲ್ಲವೆಂದು ಧನಿಕ ಒಪ್ಪುತ್ತಾನೆ. ಶಿವನ ಭೂತ ದೈತ್ಯಶಕ್ತಿಯುಳ್ಳವ. ಹಲವಾರು ಜನರ ಕೆಲಸ ಒಬ್ಬನೇ ಮಾಡುತ್ತಾನೆ. ಹೊಲ ಹರಗುತ್ತಾನೆ, ನೀರು ತರುತ್ತಾನೆ, ಎಲ್ಲ ಕೆಲಸಗಳನ್ನು ಮುಗಿಸಿಬಿಡುತ್ತಾನೆ. ಒಳ್ಳೆಯ ಕೆಲಸಗಾರ ದೊರೆತ ಎಂಬ ಸುಖ ಕೆಲವೇ ದಿನಗಳಲ್ಲಿ ಮಾಯವಾಗುತ್ತದೆ. ಕೆಲಸವಿಲ್ಲದ ಭೂತ ಯಜಮಾನನಿಗೆ ತಲೆಶೂಲೆಯಾಗುತ್ತಾನೆ. ಯಜಮಾನನಿಗೆ ಬೇರೆ ಯಾವ ಕೆಲಸ ಮಾಡಲು ಬಿಡದೆ, 'ಏನು ಮಾಡಲಿ' ಎನ್ನುತ್ತ ತಲೆತಿನ್ನುತ್ತಾನೆ. ಅವನ ಕಾಟದಿಂದ ಬೇಸತ್ತು ಮತ್ತೆ ಭಕ್ತ ಶಿವನಿಗೆ ಮೊರೆಹೋಗುತ್ತಾನೆ. ಶಿವ ಮತ್ತೆ ಸ್ವಪ್ನದಲ್ಲಿ ಪ್ರತ್ಯಕ್ಷನಾಗುತ್ತಾನೆ. ತನ್ನ ಗೋಳು ಭಕ್ತ ತೋಡಿಕೊಳ್ಳುತ್ತಾನೆ. ಶಿವ ಹೇಳುತ್ತಾನೆ, 'ಭೂತನನ್ನು ದುಡಿಸಿಕೊಳ್ಳುವ ಕಲೆ ನಿನಗೆ ಗೊತ್ತಿಲ್ಲವೇ. ಅವನಿಗೆ ಯಾವಾಗಲೂ ಮುಗಿಯದಂತಹ ಕೆಲಸ ಕೊಡು.'ಎಂದು. 'ಎಂಥ ಕೆಲಸ ಕೊಡಲಿ ಪ್ರಭು' ಎಂದು ಕೇಳಿದಾಗ ಶಿವ ಹೇಳುತ್ತಾನೆ. 'ನಿನ್ನ ಮನೆಯ ಮುಂದೆ ದೀಪಸ್ತಂಭ ಇದೆಯಲ್ಲ, ಅದನ್ನು ಇಡೀದಿನ ಸುತ್ತಲು ಹೇಳು. ಎಷ್ಟು ಸಲ ಸುತ್ತಿದ ಎಂಬ ಬಗ್ಗೆ ಲೆಕ್ಕ ಇಡಲು ಹೇಳು. ಅವನು ಇಡೀ ದಿನ ಸುತ್ತುತ್ತಿರಲಿ. ನಿನಗೆ ಬೇರೆ ಕೆಲಸ ಹೇಳುವ ಮನಸ್ಸಾದಾಗ, ಅವನನ್ನು ನಿಲ್ಲಿಸು, ಆ ಕೆಲಸ ಹೇಳು, ಅದು ಮುಗಿದ ಮೇಲೆ ಮತ್ತೆ ಕಂಭವನ್ನು ಸುತ್ತಲು ಹೇಳು.' ಧನಿಕನ ಸಮಸ್ಯೆ ಬಗೆಹರಿದು ಸುಖಿಯಾಗಿ ಬಾಳುತ್ತಾನೆ.

ಈ ಕತೆಯ ನೀತಿಪಾಠ ಏನೆಂದರೆ, ಮನ ಒಂದು ದೈತ್ಯ ಇದ್ದಹಾಗೆ. ಅದಕ್ಕೆ ಸದಾ ಕೆಲಸ ಇರಬೇಕು. ಇಲ್ಲದಿದ್ದರೆ ಅದು ನಮ್ಮ ತಲೆ ತಿನ್ನುತ್ತದೆ. ಎಲ್ಲ ರೋಗಗಳಿಗೂ ಮನವೇ ಕಾರಣವಾಗುತ್ತದೆ. ಕೈಯಲ್ಲಿ ಒಂದು ಜಪಮಾಲೆ ಕೊಡಬೇಕು. ಕೆಲಸವಿಲ್ಲದೇ ಇದ್ದಾಗ ಜಪಮಾಲೆ ಎಣಿಸುತ್ತಿರಬೇಕು. ಕೆಲಸ ಬಂದಾಗ ಜಪ ಬದಿಗಿಟ್ಟು ಕೆಲಸ ಮಾಡಬೇಕು.

ಈ ಕಥೆ ನನಗೆ ಬಹಳ ಸೇರಿತು. ನಾನು ಒಂದು ಸತ್ಯ ಕಥೆಯನ್ನು ಶ್ರೀ ಪಂಚಮುಖಿಯವರಿಗೆ ಹೇಳಿದೆ. ಅದನ್ನಿಲ್ಲಿ ಹೇಳುವುದು ಪ್ರಸ್ತುತವೆನಿಸುತ್ತಿದೆ. "ನಮ್ಮ ಕಾಲೇಜಿನ ಪ್ರಿನ್ಸಿಪಾಲ ಗುಜರಾತಿ ಜನ. ಅವರ ಹೆಂಡತಿಗೆ ವಿಚಿತ್ರವಾದ ಕಾಯಿಲೆ ಬಂದಿತ್ತು. ಹಸಿವೆ ಆಗುತ್ತಿರಲಿಲ್ಲ. ಮತ್ತೆ ನಿದ್ರೆಯೂ ಬರುತ್ತಿರಲಿಲ್ಲ. ಎಲ್ಲ ಡಾಕ್ಟರರು ಸೋತುಹೋದರು. ಬಾಂಬೇ ಹಾಸ್ಪಿಟಲ್‌ನಲ್ಲಿ ಎಲ್ಲ ಬಗೆಯ ಟೆಸ್ಟ ಮಾಡಿಸಿದರು. ಯಾವುದೇ ದೋಷ ಕಾಣಲಿಲ್ಲ. ಏನೂ ತಿಳಿಯದಾಗ ಅಲರ್ಜಿ ಎಂದು ಹಣೆಚೀಟಿ ಅಂಟಿಸುವುದು ವೈದ್ಯವಿಜ್ಞಾನದ ಅಜ್ಞಾನದ ಒಂದು ಮುಖ. 40–50 ಸಾವಿರ ಖರ್ಚಾಯಿತು, ಯಾವ ಕಾಯಿಲೆ ಎಂಬುದು ಗೊತ್ತಾಗಲಿಲ್ಲ. ಒಮ್ಮೆ ಗುಜರಾತದಿಂದ ಒಬ್ಬ ಯತಿವರೇಣ್ಯರು ಇವರ ಮನೆಗೆ ಬಂದಿದ್ದರು. ಮನೆಯಲ್ಲಿ ಯತಿಗಳ ಪಾದಪೂಜೆಯಾಯಿತು. ಹೆಂಡತಿಯ ಕಾಯಿಲೆಯ ಬಗ್ಗೆ ಹೇಳಿದರು. ಯತಿಗಳು ಅವಳಿಗೆ ಒಂದು ಮಂತ್ರೋಪದೇಶ ಮಾಡಿದರು. ಕೈಯಲ್ಲಿ ಜಪಮಾಲೆ ಕೊಟ್ಟು ಎಣಿಸಲು ಹೇಳಿದರು. ಒಂದೆರಡು ವಾರಗಳಲ್ಲಿ ಕಾಯಿಲೆ ಗುಣಮುಖವಾಗಿತ್ತು.

ಈ ಕತೆಯನ್ನು ಹೇಳಿದ ಮೇಲೆ ನಾನು ಶ್ರೀ ಪಂಚಮುಖಿಯವರಿಗೆ ಹೇಳಿದೆ, " ಈಗ ನನಗೆ ನೀವು ಹೇಳಿದ ಕತೆಯ ಅರ್ಥವಾಗುತ್ತಿದೆ. ಜಪದಿಂದ ಆ ಮಹಿಳೆಯ ಮನದ ಕಾಯಿಲೆಗಳಿಗೆ ಉಪಶಮನ ದೊರೆತಿತ್ತು. ಜಪಮಾಲೆ ಹಿಡಿದಾಗ ನಮ್ಮ ಹೆಬ್ಬೆರಳಿನ ಜೊತೆ ತರ್ಜನೀಯ ಮತ್ತು ಮಧ್ಯಮ ಬೆರಳಿನ ಘರ್ಷಣೆಯಾಗುತ್ತದೆ. ಅದು ಮಿದುಳಿನ ಮೇಲೆ ಪರಿಣಾಮ ಬೀರುತ್ತದೆ. ತಲೆಯಲ್ಲಿ ಸುಳಿಯುವ ಋಣಾತ್ಮಕ ವಿಚಾರಗಳು ಬದಲಾಗಿ ಧನಾತ್ಮಕ ವಿಚಾರಗಳು ಸುಳಿಯತೊಡಗುತ್ತವೆ. ಇದೂ ಒಂದು ರೀತಿಯ ಮುದ್ರಾವಿಜ್ಞಾನದಂತೆ ಕೆಲಸಮಾಡಿರಬೇಕು ಎಂದೆನಿಸುತ್ತದೆ" ಎಂದು.

ಜಪ, ತಪ, ಅನುಷ್ಠಾನ, ಮಂತ್ರೋಚ್ಚಾರಣ, ಪಾರಾಯಣದಿಂದ ಕೂಡ ಕಾಯಿಲೆಗಳು ವಾಸಿಯಾಗುತ್ತವೆ. ಈ ದಿಶೆಯಲ್ಲಿ ಅನುಸಂಧಾನ, ಶೋಧ ನಡೆಯಬೇಕಾಗಿದೆ.

– ಡಾ। 'ಜೀವಿ' ಕುಲಕರ್ಣಿ
Mobile 9324242172)

## Ribbon Pakoda



**Ingredients:**

1. One cup Chana Atta (basen)
2. One cup Rice Atta
3. Hing to taste
4. Salt to taste
5. 6 table spoon oil
6. 1 table spoon Amul Butter

Method: Mix both flour together in a bowl and add Hing & Salt as per taste and thoroughly mix them. Heat the oil till bubbling and add that bubbling oil to the mixed flour. Add table spoon of butter to flour. Mix all together and put required amount of water to make it into a dough. Take the required quantity of the dough knead well in the palm and put it in the sancha. From the sancha press the mass inside the boiling point foil in the kadai to any shape one desires. After it becomes golden brown, place it on a paper, for the excess oil to be absorbed. Arrange the Ribbon Pakoda on a platter and serve it to the room temperature.

## Basen Pakods



Ingredients:

1. One cup Chana Atta (Basen)
2. 1 table spoon Amul butter
3. 1 Tea spoon warm oil
4. Finely chopped Onions
5. Finely chopped Green chillies
6. Finely chopped Coriander Lea
7. Finely chopped Pudina
8. Salt to taste

Method: Put finely chopped onions, coriander leaves, chillies, pudina in a bowl and mix it with Amul Butter finely. Add Salt to taste and mix it well with your finger tips foir a minute or 2. Add Chana Atta with the mixture and put 1spoon of warm oil and mix it well to become a dough (¡°Caution do the add any water to the mixture to the dough¡±). Take oil in a kadai and heat it, when the oil comes to boiling point, take the paste with your finger tips and gently put it on oil one after other. When it becomes golden brown take it and place on a paper to absorb extra oil. Decorate it and serve it hot with sauce and chutney it goes well as a evening snacks.

**—Mrs. Padmini Pandit**

## ಪೂರ್ಣಿಮಾ ಎಸ್. ಶೆಟ್ಟಿ ಅವರಿಗೆ ಡಾಕ್ಟರೇಟ್ ಪದವಿ



ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯದ ಸಂಶೋಧನ ಸಹಾಯಕಿ ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ರಚಿಸಿದ 'ಮುಂಬಯಿ ಕನ್ನಡಿಗರ ಸಿದ್ಧಿಸಾಧನೆಗಳು' ಎಂಬ ಮಹಾಪ್ರಬಂಧವನ್ನು ಮನ್ನಿಸಿ ಮುಂಬಯಿ ವಿಶ್ವವಿದ್ಯಾಲಯ ಅವರಿಗೆ ಪಿಎಚ್.ಡಿ ಪದವಿ ನೀಡಿ ಗೌರವಿಸಿದೆ. ಡಾ. ಪೂರ್ಣಿಮಾ ಶೆಟ್ಟಿ ಅವರು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದರು.

ಅನ್ಯಾನ್ಯ ಕಾರಣಗಳಿಂದ ಕರ್ನಾಟಕದ ನಾನಾ ಕಡೆಗಳಿಂದ ಮುಂಬಯಿಗೆ ವಲಸೆ ಬಂದ ಕನ್ನಡಿಗರು ವಿವಿಧ ಕ್ಷೇತ್ರಗಳಲ್ಲಿ ಕಳೆದ ಎರಡು ಶತಮಾನಗಳಲ್ಲಿ ಗೈದ ಸಾಹಸ ಸಾಧನೆಯ ವರ್ಣನಾತ್ಮಕ ಸಮಗ್ರ ದಾಖಲಾತಿ, ವಿಶ್ಲೇಷಣೆ ಈ ಮಹಾ ಪ್ರಬಂಧದ ಅತಿಶಯತೆ ಎಂದು ಈ ಮಹಾಪ್ರಬಂಧದ ಮೌಲ್ಯ ಮಾಪಕರು ಹರ್ಷ ವ್ಯಕ್ತಪಡಿಸಿದ್ದಾರೆ. ಮುಂಬಯಿಯಲ್ಲಿ ನೆಲೆನಿಂತ ಕನ್ನಡಿಗರು ಕಾಲಕಾಲಕ್ಕೆ ಗೈದ ಸಾಂಸ್ಕೃತಿಕ ಪಾರಿಚಾರಿಕೆಯ ಸಮಗ್ರ ಚಿತ್ರಣವನ್ನು ಈ ಮಹಾಪ್ರಬಂಧ ಒಳಗೊಂಡಿದೆ.

ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಮೂಲತ: ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕೌಡೂರಿನ ಬೊರ್ಗಲ್‌ನವರು. ಅವರದ್ದು ಬಹುಮುಖ ಪ್ರತಿಭೆ. ಮದುವೆಯಾಗಿ ಸುಧಾಕರ ಶೆಟ್ಟಿ ಅವರ ಬಾಳಸಂಗಾತಿಯಾಗಿ ಮುಂಬಯಿ ಸೇರಿದ ಅವರು ವಿವಾಹದ ಬಳಿಕ ಉನ್ನತ ಶಿಕ್ಷಣವನ್ನು ಪಡೆದರು. ಕನ್ನಡ ವಿಭಾಗದ ಮುಂಬಯಿ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಅವರು ಅನಂತರ ಡಾ. ಜಿ. ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ 'ಶಿಮುಂಜೆ ಪರಾರಿ ಅವರ ಜೀವನ ಸಾಧನೆ' ಎಂಬ ವಿಷಯದ ಕುರಿತು ಅಧ್ಯಯನ ನಡೆಸಿ ಎಂ.ಫಿಲ್ ಪದವಿಯನ್ನು ಪಡೆದುಕೊಂಡಿದ್ದಾರೆ. ಮುಂಬೈ ವಿಶ್ವವಿದ್ಯಾಲಯದ ಸಂಶೋಧನ ಸಹಾಯಕಿಯಾಗಿ ಕಳೆದ 6 ವರ್ಷಗಳಿಂದ ಅವರು ಸೇವೆ ಸಲ್ಲಿಸುತ್ತಿದ್ದಾರೆ. ಪಿಎಚ್.ಡಿ ಅಧ್ಯಯನಕ್ಕೆ 'ವೈಸ್ ಛಾನ್ಸಿಲರ್ ಫೆಲೋಶಿಪ್' ಪಡೆದ ಮೊದಲ ಬಂಟ ಮಹಿಳೆಯೂ ಅವರಾಗಿದ್ದಾರೆ. ಕನ್ನಡ ವಿಭಾಗದಲ್ಲಿ ಅನೇಕ ರಾಷ್ಟ್ರೀಯ ಸಮ್ಮೇಳನಗಳ ಆಯೋಜನೆ, ನಿರೂಪಣೆಯ ಕಾರ್ಯವನ್ನು ಅವರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಕನ್ನಡ ಸರ್ಟಿಫಿಕೇಟ್ ತರಗತಿಗಳ ಸಂಚಾಲಕಿಯಾಗಿಯೂ, ಶಿಕ್ಷಕರಾಗಿ ಸಹ ಅವರು ಕಾರ್ಯನಿರ್ವಹಿಸಿದ್ದಾರೆ.

ಡಾ. ಪೂರ್ಣಿಮಾ. ಎಸ್. ಶೆಟ್ಟಿ ಅವರು ಬಂಟರ ಸಂಘದ ಅಂಧೇರಿ–ಬಾಂದ್ರಾ ಪ್ರಾದೇಶಿಕ ಸಮಿತಿಯ ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷರಾಗಿದ್ದು, ಸದ್ಯ ಅವರು ಕನ್ನಡ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಕವಿ, ಸ್ವಾತಂತ್ರ್ಯ ಹೋರಾಟಗಾರ, ಶಿಕ್ಷಕ, ಪತ್ರಕರ್ತ ನಾಡೋಜ ಡಾ. ಕಯ್ಯಾರ ಕಿಞ್ಞಣ್ಣರೈ ಅವರು ಕೇರಳದ ಗಡಿಯಲ್ಲಿ ಕನ್ನಡ ಬಾವುಟ ಎತ್ತಿ ಹಿಡಿದು ಕಾಸರಗೋಡು ಕನ್ನಡ ನೆಲ ತಾಯ್ನಾಡಿಗೆ ಸೇರಿ ಕರ್ನಾಟಕ ಏಕೀಕರಣವಾಗಬೇಕೆಂದು ಅಹರ್ನಿಶಿ ಹೋರಾಡಿದವರು. ಜೀವನದ ಸಂಧ್ಯಾಕಾಲದವರೆಗೂ ಐಕ್ಯಗಾನವನ್ನು ಪಠಿಸುತ್ತಾ, ಕನ್ನಡದ ಕಟ್ಟಾಳು, ಗಡಿನಾಡ ಗಾಂಧಿ ಎಂದು ಹೆಮ್ಮೆಯಿಂದ ಕರೆಸಿಕೊಂಡವರು. ನೇರ ನಡೆ - ನುಡಿಯ ವ್ಯಕ್ತಿತ್ವವನ್ನು ಹೊಂದಿರುವ ಕಯ್ಯಾರರು ಕನ್ನಡಿಗರಿಗೆ ಸ್ಫೂರ್ತಿಯ ನೆಲೆಯಾಗಿದ್ದರು. ತಮ್ಮ ಬದುಕಿನಲ್ಲಿ ಕಂಡುಂಡ ಅನುಭವಗಳ ಚಿಂತನೆಯಿಂದ, ಕನ್ನಡಿಗರ ನೋವು ನಲಿವುಗಳಿಗೆ ಪ್ರತ್ಯಕ್ಷ ಸಾಕ್ಷಿಯಂತಿದ್ದ ಕೊಂಡಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ಶತಾಯುಷಿ ಡಾ. ಕಯ್ಯಾರ ಕಿಞ್ಞಣ್ಣ ರೈ ಅವರ ಅಗಲುವಿಕೆ ಕನ್ನಡಿಗರಿಗೆ ತುಂಬಲಾರದ ನಷ್ಟವಾಗಿದೆ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಮನಸಾ ಹಾರೈಸೋಣ.

**ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರು**
**ಮೈಸೂರು ಅಸೋಸಿಯೇಷನ್, ಮುಂಬಯಿ**

Date of Publication : 10th of every month RNI No. 040015 / 83
MNE / 93 / 2015-17 Date of Posting: 10/11th of every month at Mumbai
Patrika Channel Sorting Office G.P.O.

In the recent years the fort has been declared as a protected monument by the government.


**Geography and Climate**

Lohagad is part of the Western Ghats. It rises to an elevation of 1,033 m (3,389 ft) above sea level, and is located to the southwest of the larger Visapur fort.



***Vinchukata fortification***

The range divides the basins of the Indrayani and Pavana rivers. Lohagad overlooks the Pavana reservoir, located to the



south of the mountain. The hill extends to the northwest to a fortified spur, alled Vinchukata (Scorpion's tail) because of its


***The fort as seen from its base during monsoon***



resembling shape. The four large gates of Lohagad are still in good condition and reasonably intact.



During the monsoon, the top of the fort is covered with mist and clouds and becomes particularly wet with growing moss. The roads and trails leading to the hill are quite slippery at this time of the year and precautions are necessary to be taken while venturing the routes.



People can also hike all the way to the fort. Bhaja Caves is on the way to Lohagad if a small diversion is taken. This walk is a particular favorite of trekkers, especially in the monsoon season. It is a simple, very scenic and pleasant trek and the distance from Malavli and Lohagad can be covered in around two hours. The trekking route becomes



slippery during the rainy season and is dangerous to hike to the fort during this time. A variety of birds and insects can also be spotted in these hills.

Edited, Printed & Published by Dr. Jyothi Satish, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938